# INTEL ಗೌಪ್ಯತೆ ಸೂಚನೆ

*ಕೊನೆಯದಾಗಿ ಪರಿಷ್ಕರಿಸಿದ್ದು: ಆಗಸ್ಟ್ 31, 2023*

## ಗೌಪ್ಯತೆ ಮತ್ತು ನಿಮ್ಮ ಮಾಹಿತಿ

Intel ವ್ಯವಹಾರವು ಅದ್ಭುತ ಅನುಭವಗಳನ್ನು ಸಾಧ್ಯವಾಗಿಸುವ ರೀತಿಯಲ್ಲಿ ವ್ಯವಹಾರಗಳು, ಗ್ರಾಹಕರು ಮತ್ತು ಸಮಾಜಕ್ಕೆ ತಂತ್ರಜ್ಞಾನವನ್ನು ಒದಗಿಸುತ್ತದೆ ಆದರೆ ನಿಮ್ಮ ಗೌಪ್ಯತೆಯಲ್ಲಿ ರಾಜಿ ಮಾಡಿಕೊಳ್ಳುವುದಿಲ್ಲ. ನಿಮ್ಮ ಗೌಪ್ಯತೆ ಹಕ್ಕುಗಳನ್ನು ಬೆಂಬಲಿಸುವ ಆವಿಷ್ಕಾರ ಮತ್ತು ಕಾರ್ಯಕ್ಷಮತೆಯಲ್ಲಿ ಹಾಗೂ ಆ ಹಕ್ಕುಗಳನ್ನು ಮನಸ್ಸಿನಲ್ಲಿಟ್ಟುಕೊಂಡು ವಿನ್ಯಾಸಗೊಳಿಸಿದ ತಂತ್ರಜ್ಞಾನದಲ್ಲಿ ನಾವು ನಂಬಿಕೆ ಇರಿಸಿದ್ದೇವೆ.

ಈ ಗೌಪ್ಯತೆ ಸೂಚನೆಯು ನಾವು ನಿಮ್ಮ ವೈಯಕ್ತಿಕ ಮಾಹಿತಿಯನ್ನು ಹೇಗೆ ಬಳಸುತ್ತೇವೆ ಮತ್ತು ನಿಮ್ಮ ಗೌಪ್ಯತೆ ಹಕ್ಕುಗಳನ್ನು ಹೇಗೆ ಗೌರವಿಸುತ್ತೇವೆ ಎನ್ನುವುದನ್ನು ವಿವರಿಸುತ್ತದೆ.

ನಿರ್ದಿಷ್ಟವಾಗಿ, ಈ ಗೌಪ್ಯತೆ ಸೂಚನೆಯು ನಿಮ್ಮ ವೈಯಕ್ತಿಕ ಮಾಹಿತಿಯನ್ನು ನಮ್ಮ ಉತ್ಪನ್ನಗಳು, ಸೇವೆಗಳು ಮತ್ತು ತಂತ್ರಜ್ಞಾನಗಳು ಹೇಗೆ ಬಳಸುತ್ತವೆ ಎನ್ನುವುದನ್ನು ವಿವರಿಸುತ್ತದೆ. ಒಂದು ಪ್ರತ್ಯೇಕ ಅಥವಾ ಪೂರಕ ಗೌಪ್ಯತೆ ಸೂಚನೆಯನ್ನು ಒದಗಿಸದ ಹೊರತು, ನಮ್ಮ ವೆಬ್‌ಸೈಟ್‌ಗಳು, ಉತ್ಪನ್ನಗಳು, ಆನ್‌ಲೈನ್ ಸೇವೆಗಳು, ಸಾಫ್ಟ್‌ವೇರ್, ಆ್ಯಪ್‌ಗಳು, ಟೂಲ್‌ಗಳು ಮತ್ತು ಇತರ ಸೇವೆಗಳು ಹಾಗೂ ನಾವು ಆನ್‌ಲೈನ್ ಮತ್ತು ಆಫ್‌ಲೈನ್ ಎರಡೂ ಕಡೆಗಳಲ್ಲಿ ಒದಗಿಸುವ ಕಾರ್ಯವೈಶಿಷ್ಟ್ಯಗಳಾದ್ಯಂತ (ಸಮಗ್ರವಾಗಿ "**Intel® Services**" ಎಂದು ಉಲ್ಲೇಖಿಸಲಾಗುತ್ತದೆ), ವೈಯಕ್ತಿಕ ಮಾಹಿತಿಯ ನಮ್ಮ ಬಳಕೆಗೆ ಇದು ಅನ್ವಯಿಸುತ್ತದೆ. ನಿರ್ದಿಷ್ಟ Intel® Services ಗೆ ಪ್ರಕಟಿಸಿರುವ ಹೆಚ್ಚುವರಿ ಮಾಹಿತಿಗಾಗಿ ಇಲ್ಲಿ ನೋಡಿ ಅಭ್ಯರ್ಥಿ ಸೂಚನೆ, Intel® Active Management Technology ಸೂಚನೆ.

## ಹೆಚ್ಚುವರಿ ಗೌಪ್ಯತೆ ಸೂಚನೆಗಳು ಮತ್ತು ಪೂರಕಗಳು

ಈ ಕೆಳಗಿನ ಗೌಪ್ಯತೆ ಪೂರಕಗಳು, ನೀತಿಗಳು, ಸೂಚನೆಗಳು ಮತ್ತು ಹೇಳಿಕೆಗಳನ್ನು ಈ ಗೌಪ್ಯತೆ ಸೂಚನೆಯಲ್ಲಿ ಉಲ್ಲೇಖದ ಮೂಲಕ ಅಳವಡಿಸಲಾಗಿದೆ:

- ಅಭ್ಯರ್ಥಿ ಸೂಚನೆ
- Intel® Active Management Technology ಸೂಚನೆ

## ನಾವು ಯಾವ ರೀತಿಯ ಮಾಹಿತಿಯನ್ನು ಸಂಗ್ರಹಿಸುತ್ತೇವೆ?

ತಮ್ಮ ವ್ಯವಹಾರ ಕಾರ್ಯಾಚರಣೆಗಳ ಭಾಗವಾಗಿ, ಸೇವೆಗಳನ್ನು ಒದಗಿಸಲು, ವಿನಂತಿಗಳಿಗೆ ಪ್ರತಿಕ್ರಿಯಿಸಲು ಮತ್ತು ಗ್ರಾಹಕ ಬೆಂಬಲವನ್ನು ಒದಗಿಸಲು, ಕಾನೂನು ಮತ್ತು ಕರಾರಿನ ಬಾಧ್ಯತೆಗಳನ್ನು ಪೂರೈಸಲು ಹಾಗೂ ತನ್ನ ವಿನೂತನ ಉತ್ಪನ್ನಗಳನ್ನು ನಿರ್ಮಿಸಲು ಮಾಹಿತಿಯನ್ನು Intel ಸಂಗ್ರಹಿಸುತ್ತದೆ. ನೀವು ಒಂದು Intel ಉತ್ಪನ್ನವನ್ನು ಆರ್ಡರ್ ಮಾಡಿದಾಗ, ಗ್ರಾಹಕ ಬೆಂಬಲವನ್ನು ಸಂಪರ್ಕಿಸಿದಾಗ ಅಥವಾ ಒಂದು Intel ಈವೆಂಟ್ ಅಥವಾ ಪ್ರಕಟಣೆಗಾಗಿ ನೋಂದಣಿ ಮಾಡಿಕೊಂಡಾಗ ಮುಂತಾದ ಸಂದರ್ಭಗಳಲ್ಲಿ ಈ ಡೇಟಾದಲ್ಲಿ ಕೆಲವನ್ನು ನೀವು ನೇರವಾಗಿ ಒದಗಿಸುತ್ತೀರಿ. Intel® Services ಜೊತೆಗೆ ನಿಮ್ಮ ಸಂವಹನದ

ಮೂಲಕ ಹಾಗೂ ನಮ್ಮ ವೆಬ್‌ಸೈಟ್ ಮೂಲಕವೂ ನಾವು ಮಾಹಿತಿಯನ್ನು ಸಂಗ್ರಹಿಸುತ್ತೇವೆ, ಉದಾಹರಣೆಗೆ, ಎಂಬೆಡ್ ಮಾಡಿದ ಉತ್ಪನ್ನ ತಂತ್ರಜ್ಞಾನಗಳು ಮತ್ತು ಕುಕೀಗಳನ್ನು ಬಳಸಿಕೊಂಡು. ನಾವು ತೃತೀಯ ಪಕ್ಷಗಳಿಂದಲೂ ಕೂಡ ಡೇಟಾವನ್ನು ಪಡೆಯುತ್ತೇವೆ.

### Intel ಗೆ ನೀವು ಸ್ವಇಚ್ಛೆಯಿಂದ ಒದಗಿಸುವ ಮಾಹಿತಿ

ನೀವು ವಾರ್ತಾಪತ್ರಕ್ಕೆ ಸಬ್‌ಸ್ಕ್ರೈಬ್ ಮಾಡಿದಾಗ, ಒಂದು ಖಾತೆಯನ್ನು ರಚಿಸಿದಾಗ, Intel ಇಂದ ಖರೀದಿ ಮಾಡಿದಾಗ ಅಥವಾ ಮಾಹಿತಿಯನ್ನು ವಿನಂತಿಸಿದಾಗ, ನಾವು ನಿಮ್ಮ ವಿನಂತಿಯನ್ನು ಪೂರೈಸುವ ಸಲುವಾಗಿ ಸಂಪರ್ಕ, ಬಿಲ್ಲಿಂಗ್, ಶಿಪ್ಪಿಂಗ್ ಮತ್ತು ಸಂವಹನ ಮಾಹಿತಿ, ಪಾವತಿ ಕಾರ್ಡ್ ಅಥವಾ ಹಣಕಾಸು ಖಾತೆಯ ಡೇಟಾ ಮತ್ತು ಖಾತೆ ID ಅಥವಾ ರುಜುವಾತುಗಳಂತಹ ವಿವರಗಳನ್ನು ಕೇಳುತ್ತೇವೆ. ನೀವು ನಮ್ಮ ಸ್ಟೋರ್‌ಗಳು ಅಥವಾ ಲೊಕೇಷನ್‌ಗಳಲ್ಲಿ ಒಂದಕ್ಕೆ ಭೇಟಿ ನೀಡಿದರೆ, ಒಂದು ವ್ಯಾಪಾರ ಪ್ರದರ್ಶನ ಅಥವಾ ಈವೆಂಟ್‌ಗೆ ಹಾಜರಾದರೆ ಅಥವಾ ಇಲ್ಲದಿದ್ದಲ್ಲಿ ನಮ್ಮನ್ನು ಸಂಪರ್ಕಿಸಿದರೆ, ಆಗ ಕೂಡ ಅದೇ ರೀತಿಯ ಮಾಹಿತಿಯನ್ನು ನೀವು ಸ್ವಇಚ್ಛೆಯಿಂದ ಒದಗಿಸಬಹುದು.

ಕೆಲವು Intel® Services ನಲ್ಲಿನ ಸಂವಾದಾತ್ಮಕ ವೈಶಿಷ್ಟ್ಯಗಳು ಸ್ನೇಹಿತರನ್ನು ಆಹ್ವಾನಿಸಲು, ಇತರರನ್ನು ಫಾಲೋ ಮಾಡಲು, ವಿಶಿಷ್ಟ ಪೋಸ್ಟ್‌ಗಳಿಗೆ ಸಂಬಂಧಿಸಿ ಕಾಮೆಂಟ್ ಮಾಡಲು ಅಥವಾ ಪೋಸ್ಟ್‌ಗಳನ್ನು ಮಾಡಲು ಅಥವಾ ಫೋಟೋಗಳು, ವೀಡಿಯೊ ಅಥವಾ ಇತರ ವೈಯಕ್ತಿಕ ವಿಷಯವನ್ನು ಹಂಚಿಕೊಳ್ಳಲು ನಿಮಗೆ ಅವಕಾಶ ಕಲ್ಪಿಸಬಹುದು. ನೀವು ಸಮ್ಮತಿಯೊಂದಿಗೆ ಈ ವಿಷಯವನ್ನು ಹಂಚಿಕೊಂಡಾಗ, ಈ ಸೂಚನೆಯ ಅನುಸಾರ ನಾವು ಅದನ್ನು ಸಂಗ್ರಹಿಸಬಹುದು ಮತ್ತು ಬಳಸಬಹುದು. ಹೆಚ್ಚುವರಿಯಾಗಿ, ನಿಮ್ಮ ಸಾಮಾಜಿಕ ತೊಡಗಿಕೊಳ್ಳುವಿಕೆಯ ಮೂಲಕ ಇನ್ನೊಬ್ಬ ಬಳಕೆದಾರನಿಂದ ನಿಮ್ಮ ಕುರಿತ ಮಾಹಿತಿಯನ್ನು ನಾವು ಸ್ವೀಕರಿಸಬಹುದು, ಉದಾಹರಣೆಗೆ ನಿಮ್ಮನ್ನು ಒಳಗೊಂಡ ವಿಷಯವನ್ನು ನಿಮ್ಮ ಸ್ನೇಹಿತರು ಪೋಸ್ಟ್ ಮಾಡಿದಾಗ.

ಕಾಲಕಾಲಕ್ಕೆ ನಾವು ಸ್ವಂತವಾಗಿ ಅಥವಾ ಪಾಲುದಾರರೊಂದಿಗೆ ಸಂಶೋಧನೆ, ವಿಶ್ಲೇಷಣೆ, ಐತಿಹಾಸಿಕ ಮತ್ತು ವೈಜ್ಞಾನಿಕ ಅಧ್ಯಯನಗಳಲ್ಲಿ ತೊಡಗುತ್ತೇವೆ. ಅಂತಹ ಪ್ರಯತ್ನಗಳ ಭಾಗವಾಗಿ ಒಂದು ಮಾಹಿತಿಯುಕ್ತ ಸಮ್ಮತಿ ಪ್ರಕ್ರಿಯೆಯ ಮೂಲಕ ಭಾಗವಹಿಸಲು ಮತ್ತು ಸ್ವಇಚ್ಛೆಯಿಂದ ಮಾಹಿತಿ ಹಂಚಿಕೊಳ್ಳಲು ವ್ಯಕ್ತಿಗಳನ್ನು ನಾವು ಆಹ್ವಾನಿಸುತ್ತೇವೆ. ಅಂತಹ ಸಂಶೋಧನೆಯ ಉದ್ದೇಶಕ್ಕಾಗಿ ತೃತೀಯ ಪಕ್ಷದಿಂದ ನಾವು ವೈಯಕ್ತಿಕ ಮಾಹಿತಿಯನ್ನು ಸ್ವೀಕರಿಸಿದಾಗ, ವೈಯಕ್ತಿಕ ಮಾಹಿತಿಯನ್ನು ಜವಾಬ್ದಾರಿಯುತ ಮತ್ತು ಕಾನೂನುಬದ್ಧ ರೀತಿಯಲ್ಲಿ ಸಂಗ್ರಹಿಸಲಾಗಿದೆ ಎಂದು ದೃಢಪಡಿಸಿಕೊಳ್ಳಲು ನಾವು ಪ್ರಕ್ರಿಯೆಗಳನ್ನು ಕೈಗೊಳ್ಳುತ್ತೇವೆ.

ನಮಗೆ ಅಥವಾ ನಮ್ಮ ಸೇವಾ ಪೂರೈಕೆದಾರರಿಗೆ ಇತರರ ಕುರಿತು ಯಾವುದೇ ವೈಯಕ್ತಿಕ ಮಾಹಿತಿಯನ್ನು ನೀವು ಸಲ್ಲಿಸಿದರೆ, ಹಾಗೆ ಮಾಡಲು ನಿಮಗೆ ಅಧಿಕಾರವಿದೆ ಎಂದು ಖಚಿತಪಡಿಸಿಕೊಳ್ಳುವುದಕ್ಕೆ ನೀವು ಜವಾಬ್ದಾರರಾಗಿರುತ್ತೀರಿ ಮತ್ತು ಈ ಗೌಪ್ಯತೆ ಸೂಚನೆ ಅನುಸಾರ (ಉದಾಹರಣೆಗೆ, ಅವರ ಸಮ್ಮತಿಗಾಗಿ ನೀವು ಕೇಳುವ ಮೂಲಕ), ಅವರ ವೈಯಕ್ತಿಕ ಮಾಹಿತಿಯನ್ನು ಬಳಸಿಕೊಳ್ಳಲು ನಮಗೆ ಅವಕಾಶ ಕಲ್ಪಿಸುತ್ತೀರಿ.

### ಸಾಧನ ಮತ್ತು ಉತ್ಪನ್ನ ಕಾರ್ಯಾಚರಣೆ

ಸಾಫ್ಟ್‌ವೇರ್ ಅಥವಾ ಒಂದು ಆ್ಯಪ್‌ನಂತಹ ಕೆಲವು Intel® Service ಅನ್ನು ನೀವು ಡೌನ್‌ಲೋಡ್ ಮಾಡಿಕೊಂಡು ಬಳಸಿದಾಗ, ಸಾಫ್ಟ್‌ವೇರ್ ಅಥವಾ ಆ್ಯಪ್ ನಮ್ಮ

ಸರ್ವರ್‌ಗಳನ್ನು ಯಾವಾಗ ಪ್ರವೇಶಿಸುತ್ತದೆ, ಸಾಫ್ಟ್‌ವೇರ್ ಅಥವಾ ಆ್ಯಪ್ ಬಳಕೆಯ ಮೂಲಕ ಯಾವ ಮಾಹಿತಿ ಅಥವಾ ಫೈಲ್‌ಗಳನ್ನು ಡೌನ್‌ಲೋಡ್ ಮಾಡಲಾಗಿದೆ ಮತ್ತು ಬಳಕೆಯ ಸಂದರ್ಭ ಸಾಫ್ಟ್‌ವೇರ್ ಅಥವಾ ಆ್ಯಪ್‌ನೊಂದಿಗೆ ನೀವು ಹೇಗೆ ಸಂವಹನ ನಡೆಸುತ್ತೀರಿ ಮುಂತಾದ ಬಳಕೆಯ ಡೇಟಾವನ್ನು ನಾವು ಟ್ರ್ಯಾಕ್ ಮಾಡಬಹುದು ಮತ್ತು ಸಂಗ್ರಹಿಸಬಹುದು. ಅನ್ವಯಿಸುವ ಡೇಟಾ ರಕ್ಷಣೆ ಕಾನೂನುಗಳ ಅಡಿಯಲ್ಲಿ ಈ ಡೇಟಾದಲ್ಲಿ ಒಂದಿಷ್ಟನ್ನು ವೈಯಕ್ತಿಕ ಮಾಹಿತಿಯಾಗಿ ರಕ್ಷಿಸಬಹುದು. ನೀವು Intel® Services ಜೊತೆಗೆ ಹೇಗೆ ಸಂವಹನ ನಡೆಸುತ್ತೀರಿ ಎನ್ನುವುದನ್ನು ಅರ್ಥಮಾಡಿಕೊಳ್ಳಲು ಮತ್ತು ನಿಮಗೆ ಅತ್ಯುತ್ತಮ ಅನುಭವಗಳನ್ನು ಒದಗಿಸಲು ಈ ಮಾಹಿತಿಯನ್ನು ನಾವು ಸಂಗ್ರಹಿಸುತ್ತೇವೆ. ಭದ್ರತಾ ಉದ್ದೇಶಗಳಿಗಾಗಿ ಸಹ ನಾವು ಈ ಮಾಹಿತಿಯನ್ನು ಬಳಸಬಹುದು. ನೀವು ಬಳಸುವ ಒಂದಕ್ಕಿಂತ ಹೆಚ್ಚಿನ ಸಾಧನದಿಂದ ನಾವು ಸಂಗ್ರಹಿಸಿದ ಮಾಹಿತಿಯನ್ನು ನಿಮ್ಮ ಅಥವಾ ನಿಮ್ಮ ಇತರ ಸಾಧನಗಳ ಕುರಿತು ನಾವು ಸಂಗ್ರಹಿಸಿದ ಇತರ ಮಾಹಿತಿಯೊಂದಿಗೆ ನಾವು ಸಂಬಂಧಪಡಿಸಬಹುದು.

ಇದರ ಜೊತೆಗೆ, ಸಾಧನ ಹೇಗೆ ಕಾರ್ಯನಿರ್ವಹಿಸುತ್ತಿದೆ ಎನ್ನುವ ಕುರಿತ ಮಾಹಿತಿಯನ್ನು ಸಂಗ್ರಹಿಸುವ ಪ್ರಕ್ರಿಯೆಗೊಳಿಸುವ ಚಿಪ್‌ನಂತಹ ಎಂಬೆಡ್ ಮಾಡಿದ ತಂತ್ರಜ್ಞಾನವನ್ನು ಬಹುತೇಕ ಕಂಪ್ಯೂಟಿಂಗ್ ಸಾಧನಗಳು ಒಳಗೊಂಡಿರುತ್ತವೆ. ಈ ಮಾಹಿತಿಯು ಇವುಗಳನ್ನು ಒಳಗೊಂಡಿರಬಹುದು:

- ಆಪರೇಟಿಂಗ್ ಸಿಸ್ಟಂನ ವಿಧ ಮತ್ತು ಆವೃತ್ತಿ, ಹಾರ್ಡ್‌ವೇರ್ ಆವೃತ್ತಿ, ಸಾಧನದ ಸೆಟ್ಟಿಂಗ್‌ಗಳು, ಸಾಫ್ಟ್‌ವೇರ್ ವಿಧಗಳು, ಬ್ಯಾಟರಿ ಮತ್ತು ಸಿಗ್ನಲ್ ಸಾಮರ್ಥ್ಯ, ಸ್ಕ್ರೀನ್ ರೆಸೊಲ್ಯೂಷನ್, ಸಾಧನ ಉತ್ಪಾದಕರು ಮತ್ತು ಮಾಡೆಲ್, ಭಾಷೆ ಹಾಗೂ ಇಂಟರ್‌ನೆಟ್ ಬ್ರೌಸರ್ ವಿಧ ಮತ್ತು ಆವೃತ್ತಿ. ನೀವು ಬಳಸುತ್ತಿರುವ ಯಾವುದೇ Intel® Services (ಆ್ಯಪ್‌ನಂತಹವು) ಹೆಸರು ಮತ್ತು ಆವೃತ್ತಿಯನ್ನು ಸಹ ಸಂಗ್ರಹಿಸಲಾಗುತ್ತದೆ.
- ಭೌಗೋಳಿಕ ಸ್ಥಳಗಳು, ಉದಾಹರಣೆಗೆ GPS, Bluetooth ಅಥವಾ WiFi ಸಿಗ್ನಲ್‌ಗಳ ಮೂಲಕ.
- ನಿಮ್ಮ ಮೊಬೈಲ್ ಆಪರೇಟರ್ ಅಥವಾ ISP ಹೆಸರು, ಬ್ರೌಸರ್ ವಿಧ, ಭಾಷೆ ಮತ್ತು ಸಮಯ ವಲಯ, ಮೊಬೈಲ್ ಫೋನ್ ಸಂಖ್ಯೆ ಮತ್ತು IP ವಿಳಾಸದಂತಹ ಸಂಪರ್ಕ ಮಾಹಿತಿ.

ಇತರ ಅಪ್ಲಿಕೇಶನ್‌ಗಳಿಂದ ಈ ಮಾಹಿತಿಗೆ ಪ್ರವೇಶ ಮತ್ತು ಸಾಧನದಿಂದ Intel ಅಥವಾ ಇತರ ಸೇವಾ ಪೂರೈಕೆದಾರರಿಗೆ ಈ ಮಾಹಿತಿಯ ಪ್ರಸರಣವನ್ನು ಸಾಧನದಲ್ಲಿ ಕಾರ್ಯಾಚರಿಸುತ್ತಿರುವ ಆಪರೇಟಿಂಗ್ ಸಿಸ್ಟಂ ಅಥವಾ ಇತರ ಸಾಫ್ಟ್‌ವೇರ್‌ನಿಂದ ನಿಯಂತ್ರಿಸಬಹುದು.

ಕೆಲವು ಸನ್ನಿವೇಶಗಳಲ್ಲಿ, ವೈಯಕ್ತಿಕ ಮಾಹಿತಿಯನ್ನು ಸಂಗ್ರಹಿಸಬಹುದಾದ ಒಂದು ಉತ್ಪನ್ನ ಅಥವಾ ಸಾಧನದೊಳಗೆ Intel ತಂತ್ರಜ್ಞಾನವನ್ನು ಬಳಸಲಾಗುತ್ತದೆ, ಆ ಮಾಹಿತಿಯನ್ನು Intel ನೊಂದಿಗೆ ಹಂಚಿಕೊಳ್ಳುವುದಿಲ್ಲ. ಈ ಮಾಹಿತಿಯನ್ನು ಉತ್ಪನ್ನ ಅಥವಾ ಸಾಧನದ ಉತ್ಪಾದಕರು ಸಂಗ್ರಹಿಸಬಹುದು ಮತ್ತು ಅವರು ನಿಮ್ಮ ವೈಯಕ್ತಿಕ ಮಾಹಿತಿಯನ್ನು ಹೇಗೆ ಬಳಸುತ್ತಾರೆ ಎಂದು ಅರ್ಥಮಾಡಿಕೊಳ್ಳಲು ಆ ಉತ್ಪಾದಕರು ಪ್ರಕಟಿಸಿದ ಗೌಪ್ಯತೆ ಸೂಚನೆ, ಗೌಪ್ಯತೆ ನೀತಿ ಅಥವಾ ಸಂಬಂಧಿತ ನಿಯಮಗಳನ್ನು ನೀವು ಓದಬೇಕಾಗುತ್ತದೆ.

ಕೆಲವು Intel® Services ಗುರುತಿಸುವಿಕೆ ಅಥವಾ ದೃಢೀಕರಣಕ್ಕಾಗಿ ಅಥವಾ ನಿರ್ದಿಷ್ಟ ವೈಶಿಷ್ಟ್ಯಗಳ ಲಾಭ ಪಡೆಯುವುದಕ್ಕಾಗಿ ಬಯೋಮೆಟ್ರಿಕ್ ಮಾಹಿತಿಯನ್ನು ಬಳಸಲು ನಿಮಗೆ ಅವಕಾಶ ಕಲ್ಪಿಸಬಹುದು. ಬಯೋಮೆಟ್ರಿಕ್ ಡೇಟಾವು ನಿಮ್ಮ ಬೆರಳಚ್ಚು, ಮುಖದ

ವೈಶಿಷ್ಟ್ಯಗಳು, ಧ್ವನಿ ಅಥವಾ ಸರಳವಾಗಿ ವಿಶಿಷ್ಟ ದೈಹಿಕ ಗುಣಕ್ಷಣಗಳನ್ನು ಒಳಗೊಂಡಿರಬಹುದು.

ನಿಮ್ಮ IP ವಿಳಾಸ ಅಥವಾ GPS ನಿಂದ ಊಹಿಸಿದ ಲೊಕೇಷನ್‌ನಂತಹ ಭೌಗೋಳಿಕ ಸ್ಥಳ ಮಾಹಿತಿಯನ್ನು ಮತ್ತು Intel® Services ಜೊತೆಗೆ ನೀವು ಹೇಗೆ ತೊಡಗಿಕೊಳ್ಳುತ್ತೀರಿ ಮತ್ತು ಅದನ್ನು ಹೇಗೆ ಬಳಸುತ್ತೀರಿ ಎನ್ನುವ ಮಾಹಿತಿಯನ್ನೂ ಕೂಡ Intel® Services ಸಂಗ್ರಹಿಸಬಹುದು, ಉದಾಹರಣೆಗೆ ಈ ಸೇವೆಗಳನ್ನು ನೀವು ಪ್ರವೇಶಿಸುವ ಸಾಧನದಲ್ಲಿ ಸ್ಥಳ-ಸಂಚಾಲಿತಗೊಳಿಸಿದ ಸೇವೆಗಳನ್ನು ಸಕ್ರಿಯಗೊಳಿಸಲು ನೀವು ಆಯ್ಕೆ ಮಾಡಿರುವಾಗ.

ಗುರುತಿಸುವಿಕೆ ಅಥವಾ ದೃಢೀಕರಣಕ್ಕಾಗಿ ಅಥವಾ ನಿಖರ ಭೌಗೋಳಿಕ ಸ್ಥಳಕ್ಕಾಗಿ ಬಯೋಮೆಟ್ರಿಕ್ಸ್‌ನಂತಹ ನಿಮ್ಮ ವೈಯಕ್ತಿಕ ಮಾಹಿತಿಯ ಹೆಚ್ಚು ಸೂಕ್ಷ್ಮ ಪ್ರವರ್ಗಗಳನ್ನು Intel® Services ಬಳಸಿದಾಗ, ಅದಕ್ಕೆ ಸಂಬಂಧಿಸಿದ ಮೆನುಗಳು ಮತ್ತು ಸೆಟ್ಟಿಂಗ್‌ಗಳಲ್ಲಿ ನೀವು ಹೊಂದಿಸಿದ ಆದ್ಯತೆಗಳನ್ನು Intel ಗೌರವಿಸುತ್ತದೆ.

Intel® Services ಬಳಸುವಲ್ಲಿನ ತಂತ್ರಜ್ಞಾನಗಳ ವಿಶಾಲ ಶ್ರೇಣಿಯಿಂದ ಮತ್ತು ಅದರ ಕುರಿತು ನಾವು ಮಾಹಿತಿಯನ್ನು ಸಂಗ್ರಹಿಸುತ್ತೇವೆ. ಸಂಗ್ರಹಿಸಿದ ಮಾಹಿತಿಯ ವಿಧವು ತಂತ್ರಜ್ಞಾನ, ಬಳಕೆ ಮತ್ತು ಸಾಧನ ಹಾಗೂ ವೈಯಕ್ತಿಕ ಸೆಟ್ಟಿಂಗ್‌ಗಳನ್ನು ಅವಲಂಬಿಸಿರುತ್ತದೆ. ಈ ತಂತ್ರಜ್ಞಾನಗಳ ಉದಾಹರಣೆಗಳಲ್ಲಿ ಕಂಪ್ಯೂಟರ್‌ಗಳು, ಫೋನ್‌ಗಳು ಮತ್ತು ಟ್ಯಾಬ್ಲೆಟ್‌ಗಳಷ್ಟೇ ಅಲ್ಲದೆ ಸಂವಾದಾತ್ಮಕ ಧರಿಸಬಹುದಾದ ಸಾಧನಗಳು, ಮನೆಯಲ್ಲಿನ ಸಂಪರ್ಕಪಡಿಸಿರುವ ತಂತ್ರಜ್ಞಾನಗಳು, ಡ್ರೋನ್‌ಗಳು ಅಥವಾ ಇತರ ವಾಹನಗಳು ಸೇರಿರಬಹುದು. ಡ್ರೋನ್‌ಗಳು ಮತ್ತು ಸ್ವಾಯತ್ತ ವಾಹನಗಳಿಗೆ ನಾವು ತಂತ್ರಜ್ಞಾನವನ್ನು ಒದಗಿಸುವಲ್ಲಿ, ಅವು ಉದ್ದೇಶಪೂರ್ವಕವಲ್ಲದೆ ಅಥವಾ ಆಕಸ್ಮಿಕವಾಗಿ ಜನರನ್ನು ಚಿತ್ರೀಕರಿಸುವ ಆಡಿಯೊ, ವೀಡಿಯೊ ಮತ್ತು ಫೋಟೋಗ್ರಾಫ್‌ಗಳನ್ನು ಸೆರೆಹಿಡಿಯಬಹುದು, ಉದಾಹರಣೆಗೆ ಒಂದು ಹೊಲದಲ್ಲಿ ಕೆಲಸ ಮಾಡುತ್ತಿರುವ ಕಾರ್ಮಿಕರು ಅಥವಾ ರಸ್ತೆ ದಾಟುತ್ತಿರುವ ಪಾದಚಾರಿಗಳು. ಸೂಕ್ತವಾಗಿರುವಲ್ಲಿ, ಅದನ್ನು ಅಸಮರ್ಪಕವಾಗಿ ಬಳಸದಂತೆ ತಡೆಯಲು ನಾವು ತಾಂತ್ರಿಕ ಮತ್ತು ಸಾಂಸ್ಥಿಕ ನಿಯಂತ್ರಣಗಳನ್ನು ಬಳಸುತ್ತೇವೆ, ಆದರೆ ಮ್ಯಾಪಿಂಗ್, ಟೊಪೊಗ್ರಫಿ, ಅಡೆತಡೆಗಳು, ಸಂಚಾರದಟ್ಟಣೆ ಮತ್ತು ಅದೇ ರೀತಿಯ ವೈಶಿಷ್ಟ್ಯಗಳು ಸೇರಿದಂತೆ ಉತ್ಪನ್ನ ಕಾರ್ಯವೈಶಿಷ್ಟ್ಯ ಮತ್ತು ಸುರಕ್ಷತೆಗಾಗಿ ಆಲ್ಗಾರಿದಂ ಸುಧಾರಿಸಲು ಸಹಾಯ ಮಾಡುವುದಕ್ಕೆ ಈ ಮಾಹಿತಿ ಮುಖ್ಯವಾಗಿದೆ.

### ತೃತೀಯ ಪಕ್ಷಗಳಿಂದ ಮಾಹಿತಿ

ಪಾಲುದಾರರು, ಮಾರಾಟಗಾರರು, ಪೂರೈಕೆದಾರರು ಮತ್ತು ಇತರ ತೃತೀಯ ಪಕ್ಷಗಳ ಮೂಲಕ ನಾವು ಮಾಹಿತಿಯನ್ನು ಪಡೆಯುತ್ತೇವೆ. ನಾವು ಮಾಹಿತಿ ಪಡೆಯುವ ಪಕ್ಷಗಳು ಸಾಮಾನ್ಯವಾಗಿ ಕಾರ್ಪೊರೇಟ್ ಸಂಸ್ಥೆಗಳಾಗಿರುತ್ತವೆ (ಅದಾಗ್ಯೂ ಕೆಲವು ಶೈಕ್ಷಣಿಕ ಅಥವಾ ಸಾರ್ವಜನಿಕ ಸಂಸ್ಥೆಗಳಾಗಿರಬಹುದು) ಮತ್ತು ನಾವು ವ್ಯವಹಾರ ನಡೆಸುವ ಯಾವುದೇ ಸ್ಥಳಗಳಲ್ಲಿ ಆ ಸಂಸ್ಥೆಗಳು ಇರಬಹುದು. ಈ ಸಂಸ್ಥೆಗಳು ಹೆಚ್ಚಾಗಿ ಈ ಕೆಳಗಿನ ಪ್ರವರ್ಗಗಳಡಿ ಬರುತ್ತವೆ: ಜಾಹೀರಾತು ನೀಡುವಿಕೆ ಮತ್ತು ಮಾರ್ಕೆಟಿಂಗ್ ಕಂಪನಿಗಳು, ಡೇಟಾ ಸೆಟ್ ಮತ್ತು ಮಾಹಿತಿ ಮಾರಾಟಗಾರರು, ಸಾರ್ವಜನಿಕ ಡೇಟಾಬೇಸ್ ಪೂರೈಕೆದಾರರು, ಸಾಮಾಜಿಕ ಮಾಧ್ಯಮ ವೇದಿಕೆಗಳು, ಪಾಲುದಾರರು, ಉತ್ಪನ್ನಗಳು ಮತ್ತು ಸೇವೆಗಳ ಪೂರೈಕೆದಾರರು, ಈವೆಂಟ್‌ಗಳು ಅಥವಾ ವ್ಯಾಪಾರ ಪ್ರದರ್ಶನಗಳಲ್ಲಿನ ಆಯೋಜಕರು ಅಥವಾ ಮಾರಾಟಗಾರರು, ಸಂಶೋಧನಾ ಪಾಲುದಾರರು, Intel® Services ಅನ್ನು ನಿಯೋಜಿಸುವ ಉದ್ಯಮಗಳು ಅಥವಾ Intel® Services ಅನ್ನು ಒಳಗೊಂಡ ತೃತೀಯ ಪಕ್ಷದ ಆಫರ್‌ಗಳು. ಈ ತೃತೀಯ ಪಕ್ಷಗಳಿಂದ

ನಾವು ಸ್ವೀಕರಿಸುವ ಮಾಹಿತಿಯನ್ನು ನಿಮ್ಮ ಸಮ್ಮತಿಯೊಂದಿಗೆ ಸಂಗ್ರಹಿಸಲಾಗಿದೆ ಅಥವಾ ನಮಗೆ ನಿಮ್ಮ ಮಾಹಿತಿಯನ್ನು ಬಹಿರಂಗಪಡಿಸಲು ಈ ತೃತೀಯ ಪಕ್ಷಗಳಿಗೆ ಕಾನೂನುಬದ್ಧ ಅನುಮತಿ ನೀಡಲಾಗಿದೆ ಎಂದು ದೃಢಪಡಿಸಿಕೊಳ್ಳಲು ನಾವು ಕ್ರಮಗಳನ್ನು ಕೈಗೊಳ್ಳುತ್ತೇವೆ. ನಮ್ಮ ವ್ಯವಹಾರ ಕಾರ್ಯಾಚರಣೆಗಳ ಭಾಗವಾಗಿ, ಒಬ್ಬ ಪಾಲುದಾರನ ಮೂಲಕ ಕೂಡ ನಾವು ಮಾಹಿತಿಯನ್ನು ಪಡೆಯಬಹುದು ಅಥವಾ ಪಾಲುದಾರನೊಂದಿಗೆ ಡೇಟಾಸೆಟ್‌ಗಳನ್ನು ಜೊತೆಯಾಗಿ ರಚಿಸಬಹುದು. ಆಲ್ಗಾರಿದಂಗಳು ಮತ್ತು ಡೇಟಾ ಮಾಡೆಲ್‌ಗಳ ಸುಧಾರಿಸುವಿಕೆ, ಉತ್ಪನ್ನ ಪರೀಕ್ಷೆ ಮತ್ತು ಸುಧಾರಣೆ, ಅಸ್ತಿತ್ವದಲ್ಲಿರುವ ಉತ್ಪನ್ನಗಳ ವರ್ಧನೆ ಮತ್ತು ಹೊಸ ಸಾಮರ್ಥ್ಯಗಳು ಮತ್ತು ವೈಶಿಷ್ಟ್ಯಗಳ ಅಭಿವೃದ್ಧಿಯಂತಹ ಕೆಲಸಗಳಿಗಾಗಿ ಈ ರೀತಿಯ ಡೇಟಾವನ್ನು ಬಳಸಲಾಗುತ್ತದೆ. ಕೆಲವು ಸನ್ನಿವೇಶಗಳಲ್ಲಿ, ನಿಮ್ಮಿಂದ ನೇರವಾಗಿ ಅಥವಾ Intel® Services ನ ನಿಮ್ಮ ಬಳಕೆಯ ಮೂಲಕ ಸಂಗ್ರಹಿಸಿದವು ಸೇರಿದಂತೆ, ಬಹು ಮೂಲಗಳಿಂದ ನಾವು ಸ್ವೀಕರಿಸಿದ ವ್ಯಕ್ತಿಗಳ ಕುರಿತ ವೈಯಕ್ತಿಕ ಮಾಹಿತಿಯನ್ನು ನಾವು ಒಟ್ಟುಗೂಡಿಸುತ್ತೇವೆ.

### ನಮ್ಮ ವೆಬ್‌ಸೈಟ್ ಮತ್ತು ಸೇವೆಗಳ ಮೂಲಕ

ಕುಕೀಗಳು, ಪಿಕ್ಸೆಲ್ ಟ್ಯಾಗ್‌ಗಳು ಮತ್ತು ಅದೇ ರೀತಿಯ ತಂತ್ರಜ್ಞಾನಗಳ ಬಳಕೆಯ ಮೂಲಕ ನಮ್ಮ ವೆಬ್‌ಸೈಟ್ ಮತ್ತು ಕೆಲವು Intel® Services ಜೊತೆಗೆ ನೀವು ಹೇಗೆ ಸಂವಹನ ನಡೆಸುತ್ತೀರಿ ಎನ್ನುವ ಕುರಿತು ನಾವು ಮಾಹಿತಿ ಸಂಗ್ರಹಿಸುತ್ತೇವೆ. ಕುಕೀಗಳು ಮತ್ತು ಅದೇ ರೀತಿಯ ತಂತ್ರಜ್ಞಾನಗಳ ನಮ್ಮ ಬಳಕೆ, ನೀವು ಕುಕೀಗಳನ್ನು ಹೇಗೆ ನಿರ್ವಹಿಸಬಹುದು ಮತ್ತು ಟ್ರ್ಯಾಕ್ ಮಾಡಬೇಡಿ ಸಂಕೇತಗಳಿಗೆ ನಾವು ಹೇಗೆ ಪ್ರತಿಸ್ಪಂದಿಸುತ್ತೇವೆ ಎನ್ನುವ ಕುರಿತು ಹೆಚ್ಚಿನ ಮಾಹಿತಿಗಾಗಿ ದಯವಿಟ್ಟು ನಮ್ಮ Intel ಕುಕೀಗಳು ಮತ್ತು ಅದೇ ರೀತಿಯ ತಂತ್ರಜ್ಞಾನಗಳ ಸೂಚನೆ ನೋಡಿ.

## ನಾವು ಮಾಹಿತಿಯನ್ನು ಹೇಗೆ ಬಳಸುತ್ತೇವೆ

ನಿಮ್ಮ ಗೌಪ್ಯತೆಯನ್ನು ಗೌರವಿಸುವುದರೊಂದಿಗೆ, ನಮ್ಮ ವ್ಯವಹಾರದ ಬೆಳವಣಿಗೆ, ಮೆಂಟೇನನ್ಸ್ ಮತ್ತು ನಿರ್ವಹಣೆಯೊಂದಿಗೆ ಸಂಬಂಧಿಸಿದ ಕಾನೂನುಬದ್ಧ ಉದ್ದೇಶಗಳಿಗಾಗಿ ನಾವು ಸಂಗ್ರಹಿಸಿದ ಮಾಹಿತಿಯನ್ನು ನಾವು ಬಳಸುತ್ತೇವೆ. ಈ ಬಳಕೆಗಳಲ್ಲಿ, ನಮ್ಮ ಆಂತರಿಕ ಕಾರ್ಯಾಚರಣೆಗಳು ಮತ್ತು ಆಡಳಿತ, ನಿಮ್ಮೊಂದಿಗೆ ಸಂವಹನ ನಡೆಸುವುದು ಮತ್ತು Intel® Services ಗಾಗಿ, ಜಾಹೀರಾತು ನೀಡುವಿಕೆ ಮತ್ತು ಮಾರ್ಕೆಟಿಂಗ್‌ಗಾಗಿ ನಿಮ್ಮ ವಿನಂತಿಗಳನ್ನು ಪೂರೈಸುವುದು, Intel® Services ನ ಕಾರ್ಯಶೀಲತೆ ಮತ್ತು ಭದ್ರತೆಯ ಮೇಲೆ ನಿಗಾ ವಹಿಸುವುದು ಮತ್ತು ನಿರ್ವಹಿಸುವುದು ಹಾಗೂ Intel® Services ಅನ್ನು ಸುಧಾರಿಸುವುದು, ಅಭಿವೃದ್ಧಿಪಡಿಸುವುದು, ವರ್ಧಿಸುವುದು ಅಥವಾ ಇಲ್ಲದಿದ್ದಲ್ಲಿ ಒದಗಿಸುವುದು ಸೇರಿವೆ.

### ಸಂವಹನ ನಡೆಸಲು

ಸಂದೇಶಗಳನ್ನು ಕಳುಹಿಸಲು; ಉತ್ಪನ್ನಗಳನ್ನು ರವಾನಿಸಲು ಮತ್ತು ಪಾವತಿಗಳನ್ನು ಪ್ರಕ್ರಿಯೆಗೊಳಿಸಲು; ಗ್ರಾಹಕ ಸೇವೆ ವಿನಂತಿಗಳಿಗೆ ಪ್ರತಿಸ್ಪಂದಿಸಲು; ಭದ್ರತಾ ಅಪ್‌ಡೇಟ್‌ಗಳು ಅಥವಾ ನಮ್ಮ ನೀತಿಗಳಲ್ಲಿನ ಬದಲಾವಣೆಗಳ ಕುರಿತು ಅಥವಾ ಮುಗಿಯುತ್ತಿರುವ ಸಬ್‌ಸ್ಕ್ರಿಪ್ಶನ್ ಕುರಿತು ಅಲರ್ಟ್‌ಗಳನ್ನು ಒದಗಿಸಲು; ಮತ್ತು ನಿಮ್ಮ ಸಂವಹನ ಆದ್ಯತೆಗಳ ಅನುಸಾರ ವಾರ್ತಾಪತ್ರಗಳು ಅಥವಾ ಶ್ವೇತ ಪತ್ರಗಳಂತಹ ಮಾರ್ಕೆಟಿಂಗ್ ಅಥವಾ ಮಾಹಿತಿ ಸಾಮಗ್ರಿಗಳನ್ನು ಕಳುಹಿಸಲು ನಾವು ಸಂಪರ್ಕ ಮಾಹಿತಿಯನ್ನು ಬಳಸುತ್ತೇವೆ. ನಾವು ಒಮ್ಮೊಮ್ಮೆ ಸಮೀಕ್ಷೆಗಳನ್ನು ನಡೆಸುತ್ತೇವೆ, ಸ್ಪರ್ಧೆಗಳು ಅಥವಾ ಸ್ವೀಪ್‌ಸ್ಟೇಕ್‌ಗಳನ್ನು ಆಫರ್

ಮಾಡುತ್ತೇವೆ ಅಥವಾ ಭಾಗವಹಿಸುವ ಸಲುವಾಗಿ ನೀವು ಸ್ವಇಚ್ಛೆಯಿಂದ ವೈಯಕ್ತಿಕ ಮಾಹಿತಿಯನ್ನು ಹಂಚಿಕೊಳ್ಳಬೇಕಾಗುವ ಗಮನಕೇಂದ್ರಿತ ಸಂಶೋಧನೆ ಅಥವಾ ಅಧ್ಯಯನಗಳನ್ನು ನಡೆಸುತ್ತೇವೆ. ಈ ಚಟುವಟಿಕೆಗಳು ಸಾಮಾನ್ಯವಾಗಿ ನಿಮ್ಮ ವೈಯಕ್ತಿಕ ಮಾಹಿತಿಯ ಬಳಕೆಯ ಕುರಿತು ಹೆಚ್ಚಿನ ಮಾಹಿತಿಯನ್ನು ಒದಗಿಸುವ ಹೆಚ್ಚುವರಿ ಸೂಚನೆಗಳನ್ನು ಹೊಂದಿರುತ್ತವೆ ಮತ್ತು ಅದಕ್ಕೆ ನಿಮ್ಮ ಸಮ್ಮತಿಯನ್ನು ಕೇಳಬಹುದು. ಕೆಲವು Intel® Services ಒಬ್ಬ "ಸ್ನೇಹಿತ" ಅಥವಾ ನೀವು ಒದಗಿಸುವ ಇತರ ಸಂಪರ್ಕಗಳಿಗೆ ಸಂದೇಶಗಳನ್ನು ಕಳುಹಿಸಲು ಅಥವಾ ಸಾಮಾಜಿಕ ಮಾಧ್ಯಮದಲ್ಲಿ "ಲೈಕ್ ಮಾಡಲು" ಅಥವಾ ಪೋಸ್ಟ್ ಮಾಡಲು ನಿಮಗೆ ಅವಕಾಶ ಕಲ್ಪಿಸಬಹುದು. ನಿಮ್ಮ ಸಂಪರ್ಕ ಡೇಟಾದ ಬಳಕೆಯ ನಿರ್ವಹಣೆ ಮತ್ತು ಸಬ್‌ಸ್ಕ್ರಿಪ್ಶನ್‌ಗಳು ಹಾಗೂ ಪ್ರಚಾರ ಸಂವಹನಗಳ ನಿರ್ವಹಣೆ ಕುರಿತು ಮಾಹಿತಿಗಾಗಿ, ದಯಯವಿಟ್ಟು ಈ ಸೂಚನೆಯ **ನಿಮ್ಮ ಆಯ್ಕೆಗಳು ಮತ್ತು ಹಕ್ಕುಗಳು** ವಿಭಾಗಕ್ಕೆ ಭೇಟಿ ನೀಡಿ.

### ವ್ಯವಹಾರ ಕಾರ್ಯಾಚರಣೆಗಳಿಗಾಗಿ

ನಮ್ಮ ವ್ಯವಹಾರವನ್ನು ನಡೆಸಲು ನಾವು ಮಾಹಿತಿಯನ್ನು ಬಳಸುತ್ತೇವೆ; ಉದಾಹರಣೆಗೆ, ಅಕೌಂಟಿಂಗ್, ಆಡಿಟಿಂಗ್, ಬಿಲ್ಲಿಂಗ್, ಮರುಸಮನ್ವಯಗೊಳಿಸುವಿಕೆ ಮತ್ತು ಸಂಗ್ರಹ ಚಟುವಟಿಕೆಗಳಿಗಾಗಿ. ನಿಮ್ಮ ವೈಯಕ್ತಿಕ ಮಾಹಿತಿಯ ಬಳಕೆಯ ಮೇಲೆ ಅವಲಂಬಿತವಾಗಿರುವ ಇತರ ವ್ಯವಹಾರ ಉದ್ದೇಶಗಳಲ್ಲಿ ಅಪರಾಧ ಮತ್ತು ವಂಚನೆಯ ಮೇಲೆ ನಿಗಾ ವಹಿಸುವಿಕೆ ಮತ್ತು ತಡೆಗಟ್ಟುವಿಕೆ, ನಮ್ಮ ಕಾನೂನು ಹಕ್ಕುಗಳ ರಕ್ಷಣೆ ಹಾಗೂ ಕರಾರಿನ ಬಾಧ್ಯತೆಗಳನ್ನು ಪೂರೈಸುವಿಕೆ ಸೇರಿವೆ. ನಿಮ್ಮ ಸಂವಹನ ಆದ್ಯತೆಗಳ ಅನುಸಾರವಾಗಿ Intel® Services ಬಗ್ಗೆ ಜಾಹೀರಾತು ನೀಡಲು, ಮಾರ್ಕೆಟ್ ಮಾಡಲು ಮತ್ತು ಮಾರಾಟ ಮಾಡಲು ನಿಮ್ಮನ್ನು ಸಂಪರ್ಕಿಸುವುದಕ್ಕಾಗಿಯೂ ಕೂಡ ವೈಯಕ್ತಿಕ ಮಾಹಿತಿಯನ್ನು ನಾವು ಬಳಸುತ್ತೇವೆ.

### ಕಾರ್ಯವೈಶಿಷ್ಟ್ಯ, ಅಭಿವೃದ್ಧಿ ಮತ್ತು ಸುಧಾರಣೆಗಾಗಿ

Intel® Services ಒದಗಿಸಲು, ಆಫರ್ ಮಾಡಲು, ವೈಯಕ್ತಿಕಗೊಳಿಸಲು ಮತ್ತು ಸುಧಾರಿಸಲು ನಾವು ಮಾಹಿತಿಯನ್ನು ಬಳಸುತ್ತೇವೆ. ನಿಮ್ಮ IP ವಿಳಾಸದಂತಹ ಕೆಲವು ಮಾಹಿತಿಯನ್ನು ನೆಟ್‌ವರ್ಕ್ ಕನೆಕ್ಟಿವಿಟಿಯನ್ನು ಒದಗಿಸಲು, Intel® Services ಬಳಕೆಯ ಮಟ್ಟಗಳನ್ನು ಮಾಪನ ಮಾಡಲು, ಸರ್ವರ್ ಸಮಸ್ಯೆಗಳನ್ನು ಡಯಾಗ್ನೋಸ್ ಮಾಡಲು ಮತ್ತು ಭದ್ರತಾ ವೈಶಿಷ್ಟ್ಯಗಳನ್ನು ಒದಗಿಸಲು ನಿಮ್ಮ ಸಾಧನದೊಂದಿಗೆ ಸಂವಹನ ಮಾಡುವುದಕ್ಕಾಗಿ ಬಳಸಲಾಗುತ್ತದೆ. ನಿಮ್ಮ ಮಾಹಿತಿಯ ಬಳಕೆಯ ಮೇಲೆ ಅವಲಂಬಿತವಾದ ಇತರ ವ್ಯವಹಾರ ಉದ್ದೇಶಗಳಲ್ಲಿ ಹೊಸ ಉತ್ಪನ್ನಗಳು, ಸೇವೆಗಳು ಮತ್ತು ತಂತ್ರಜ್ಞಾನಗಳ ಪರೀಕ್ಷೆ, ಮಾರ್ಪಾಡು, ಸುಧಾರಣೆ ಅಥವಾ ಅಭಿವೃದ್ಧಿಗೆ ಮತ್ತು ಟ್ರೆಂಡ್‌ಗಳ ಗುರುತಿಸುವಿಕೆಗೆ ಸಂಬಂಧಿಸಿದ ಡೇಟಾ ವಿಶ್ಲೇಷಣೆ ಸೇರಿದೆ. ನೀವು ಸ್ಥಳ-ಸಂಚಾಲಿತಗೊಳಿಸಿದ Intel® Services ಬಳಸುತ್ತಿದ್ದರೆ ವೈಯಕ್ತಿಕಗೊಳಿಸಿದ ಸ್ಥಳ-ಆಧರಿತ Intel® Services ಮತ್ತು ಕಂಟೆಂಟ್ ಅನ್ನು ನಿಮಗೆ ಒದಗಿಸಲು ಉಪಗ್ರಹ, ದೂರಸಂವಹನಗಳ ಟವರ್ ಮತ್ತು WiFi ಸಂಕೇತಗಳನ್ನು ಬಳಸಿಕೊಂಡು ಸಂಪರ್ಕಿತ ಸಾಧನದ ಭೌತಿಕ ಸ್ಥಳವನ್ನು ನಾವು ಸಂಗ್ರಹಿಸಬಹುದು. ನಮ್ಮ ವೆಬ್‌ಸೈಟ್‌ಗಳನ್ನು ಕಾರ್ಯಾಚರಿಸಲು, ಇನ್ನಷ್ಟು ದಕ್ಷವಾಗಿ ಕೆಲಸ ಮಾಡಲು ಮತ್ತು ವಿಶ್ಲೇಷಣಾತ್ಮಕ ಮಾಹಿತಿಯನ್ನು ಒದಗಿಸಲು ನಾವು ಕುಕೀಗಳನ್ನು ಬಳಸುತ್ತೇವೆ. ಪಿಕ್ಸೆಲ್ ಟ್ಯಾಗ್‌ಗಳಂತಹ ಕುಕೀಗಳಿಗೆ ಸಮಾನವಾದ ತಂತ್ರಜ್ಞಾನಗಳನ್ನು ಕೂಡ ಕೆಲವು Intel® Services ಗೆ ಸಂಬಂಧಿಸಿದಂತೆ ಬಳಸಲಾಗುತ್ತದೆ. Intel ಕುಕೀಗಳ ಬಳಕೆಗೆ ಸಂಬಂಧಿಸಿದಂತೆ ಹೆಚ್ಚಿನ ಮಾಹಿತಿಗಾಗಿ, ದಯವಿಟ್ಟು ನಮ್ಮ Intel ಕುಕೀಗಳು ಮತ್ತು ಅದೇ ರೀತಿಯ ತಂತ್ರಜ್ಞಾನಗಳ ಸೂಚನೆ ಓದಿ.

### ಉತ್ಪನ್ನ ಅಪ್‌ಡೇಟ್ ಮಾಡುವಿಕೆ ಮತ್ತು ವರದಿ ಮಾಡುವಿಕೆಗಾಗಿ

ಸಾಫ್ಟ್‌ವೇರ್ ಅಪ್‌ಡೇಟ್‌ಗಳು ಮತ್ತು ವರದಿಗಳನ್ನು ಒದಗಿಸಲು ಹಾಗೂ ಅವು ಸಮರ್ಪಕವಾಗಿ ಕಾರ್ಯನಿರ್ವಹಿಸುತ್ತಿವೆಯೇ ಎಂದು ಪರೀಕ್ಷಿಸಲು Intel® Services ಮಾಹಿತಿಯನ್ನು ಬಳಸಬಹುದು. ನಿಮ್ಮ ಸಿಸ್ಟಂಗಳು ಅಥವಾ ಸಾಧನಗಳೊಂದಿಗೆ ಸಂಬಂಧಪಟ್ಟ ಅಪ್-ಟು-ಡೇಟ್ ಆದ ಭದ್ರತೆ, ಆವೃತ್ತಿಗಳು, ವೈಶಿಷ್ಟ್ಯಗಳು, ಆಯ್ಕೆಗಳು ಮತ್ತು ನಿಯಂತ್ರಣಗಳನ್ನು ನಿಮಗೆ ಒದಗಿಸುವ ಸಲುವಾಗಿ ಫೈಲ್‌ಗಳನ್ನು ರೀಫ್ರೆಶ್ ಮಾಡಬೇಕೇ, ಅಪ್‌ಡೇಟ್ ಮಾಡಬೇಕೇ ಅಥವಾ ಆಧುನಿಕಗೊಳಿಸಬೇಕೇ ಎಂದು ಪರಿಶೀಲಿಸಲು ಅಪ್‌ಡೇಟ್ ಕಾರ್ಯವೈಶಿಷ್ಟ್ಯಗಳು ಸ್ವಯಂಚಾಲಿತವಾಗಿ ನಿಮ್ಮ ಸಿಸ್ಟಂ ಪರೀಕ್ಷಿಸಬಹುದು. ಕಾರ್ಯಕ್ಷಮತೆಯನ್ನು ವಿಶ್ಲೇಷಿಸಲು ಮತ್ತು Intel® Services ಅನ್ನು ಸುಧಾರಿಸಲು ಹಾಗೂ ನಿರ್ವಹಿಸಲು ನಾವು ಮಾಹಿತಿಯ ಮೇಲೆ ಅವಲಂಬಿತರಾಗಿದ್ದೇವೆ.

### ಜಾಹೀರಾತು ನೀಡುವಿಕೆ ಮತ್ತು ಮಾರ್ಕೆಟಿಂಗ್‌ಗಾಗಿ

ವೈಯಕ್ತಿಕಗೊಳಿಸಿದ ಕಂಟೆಂಟ್ ಒದಗಿಸುವುದಕ್ಕೆ ನಮಗೆ ಸಾಧ್ಯವಾಗಲು ಮತ್ತು ಜಾಹೀರಾತು ನೀಡುವಿಕೆ ಮತ್ತು ಮಾರ್ಕೆಟಿಂಗ್ ಅಭಿಯಾನಗಳ ಪರಿಣಾಮಕಾರತ್ವವನ್ನು ಅಧ್ಯಯನ ಮಾಡಲು, ನೀವು ಯಾವ ಜಾಹೀರಾತು ನೋಡಿದಿರಿ ಎನ್ನುವ ಕುರಿತ ಮಾಹಿತಿ ಮತ್ತು ನಾವು ಸಂಗ್ರಹಿಸುವ ಇತರ ಮಾಹಿತಿಯೊಂದಿಗೆ ನಾವು ನಿಮ್ಮ ಸಾಧನದ ಭೌತಿಕ ಸ್ಥಳವನ್ನು ಬಳಸಬಹುದು. ನಿಮ್ಮ ಸಾಧನದ ಸೆಟ್ಟಿಂಗ್‌ಗಳನ್ನು ಬದಲಾಯಿಸುವ ಮೂಲಕ ನಿಮ್ಮ ಸಾಧನದ ಸ್ಥಳದ ಬಳಕೆ ಅಥವಾ ಹಂಚಿಕೊಳ್ಳುವಿಕೆಗೆ ಅನುಮತಿಸಬೇಕೇ ಅಥವಾ ನಿರಾಕರಿಸಬೇಕೇ ಎನ್ನುವುದನ್ನು ನೀವು ಆಯ್ಕೆ ಮಾಡಬಹುದು, ಆದರೆ ಅಂತಹ ಬಳಕೆಗಳು ಅಥವಾ ಹಂಚಿಕೊಳ್ಳುವಿಕೆಯನ್ನು ನಿರಾಕರಿಸಲು ನೀವು ಆಯ್ಕೆ ಮಾಡಿಕೊಂಡರೆ, ಕೆಲವು ವೈಯಕ್ತಿಕಗೊಳಿಸಿದ Intel® Services ಮತ್ತು ಕಂಟೆಂಟ್ ಅನ್ನು ನಿಮಗೆ ಒದಗಿಸಲು ನಮಗೆ ಸಾಧ್ಯವಾಗದಿರಬಹುದು.

### ಸ್ವಯಂಚಾಲಿತ ನಿರ್ಧಾರ ಕೈಗೊಳ್ಳುವಿಕೆ

ಕೆಲವು ಸನ್ನಿವೇಶಗಳಲ್ಲಿ, ನಮ್ಮಿಂದ ನಿಮ್ಮ ವೈಯಕ್ತಿಕ ಮಾಹಿತಿಯ ಬಳಕೆಯು ನಿಮ್ಮ ಮೇಲೆ ಕಾನೂನಾತ್ಮಕವಾಗಿ ಪರಿಣಾಮ ಬೀರುವ ಅಥವಾ ಅದಕ್ಕೆ ಸಮನಾದ ರೀತಿಯಲ್ಲಿ ಗಮನಾರ್ಹವಾಗಿ ನಿಮ್ಮ ಮೇಲೆ ಪರಿಣಾಮ ಬೀರುವ ಸ್ವಯಂಚಾಲಿತ ನಿರ್ಧಾರಗಳನ್ನು ತೆಗೆದುಕೊಳ್ಳುವುದಕ್ಕೆ (ಪ್ರೊಫೈಲಿಂಗ್ ಸೇರಿದಂತೆ) ಕಾರಣವಾಗಬಹುದು.

ಸ್ವಯಂಚಾಲಿತ ನಿರ್ಧಾರಗಳು ಎಂದರೆ, ಕಾನೂನು ಅಥವಾ ಇತರ ಗಮನಾರ್ಹ ಪರಿಣಾಮಗಳನ್ನು ಹೊಂದಿರುವ, ನಮ್ಮ ಮಾನವ ವಿಮರ್ಶೆಯಿಲ್ಲದೆ ಕಂಪ್ಯೂಟರ್ ನಿರ್ಧಾರದ ಆಧಾರದಲ್ಲಿ (ಸಾಫ್ಟ್‌ವೇರ್ ಆಲ್ಗಾರಿದಂಗಳನ್ನು ಬಳಸಿಕೊಂಡು) ಸ್ವಯಂಚಾಲಿತವಾಗಿ ಮಾಡಲಾದ ನಿಮಗೆ ಸಂಬಂಧಿಸಿದ ಒಂದು ನಿರ್ಧಾರವಾಗಿದೆ. ನಿರ್ದಿಷ್ಟ ಉತ್ಪನ್ನಗಳು ಅಥವಾ ಸೇವೆಗಳಲ್ಲಿ ನಿಮ್ಮ ಆಸಕ್ತಿಯ ಮಟ್ಟದ ಕುರಿತು ಊಹೆಗಳನ್ನು ಮಾಡಲು ಸ್ವಯಂಚಾಲಿತ ವಿಶ್ಲೇಷಣೆಗಳನ್ನು, ಅಥವಾ ಕಳ್ಳತನ, ವಂಚನೆ ಅಥವಾ ಇತರ ಅಪರಾಧಗಳನ್ನು ತಡೆಯಲು ಸ್ವಯಂಚಾಲಿತ ನಿರ್ಧಾರ ಕೈಗೊಳ್ಳುವಿಕೆಯನ್ನು ನಾವು ಬಳಸುತ್ತೇವೆ. Intel ಕೃತಕ ಬುದ್ಧಿಮತ್ತೆ ಪರಿಹಾರಗಳು ವಿವಿಧ ಕ್ಷೇತ್ರಗಳಲ್ಲಿ ಡೇಟಾದ ಸ್ವಯಂಚಾಲಿತ ಪ್ರಕ್ರಿಯೆಗೊಳಿಸುವಿಕೆಗೆ ಕಾರಣವಾಗಬಹುದು. ನಮ್ಮ ಸ್ವಯಂಚಾಲಿತ ನಿರ್ಧಾರ ಕೈಗೊಳ್ಳುವಿಕೆಯು ಕಾನೂನು ಪರಿಣಾಮ ಹೊಂದಿರುವ ಅಥವಾ ನಿಮ್ಮ ಮೇಲೆ ಗಮನಾರ್ಹ ಪರಿಣಾಮ ಬೀರುವ ಸಂದರ್ಭದಲ್ಲಿ, ನಿಮ್ಮ ಹಕ್ಕುಗಳನ್ನು ರಕ್ಷಿಸುವುದಕ್ಕೆ ಸೂಕ್ತ ಕ್ರಮಗಳನ್ನು ಗುರುತಿಸಲು ಅಥವಾ ಅನ್ವಯಿಸುವ ಕಾನೂನುಗಳು ಅಗತ್ಯಪಡಿಸಿರುವಂತೆ ನಿಮ್ಮ ಸ್ಪಷ್ಟ ಸಮ್ಮತಿಯನ್ನು ಪಡೆಯಲು

ಗೌಪ್ಯತೆ ಪರಿಣಾಮ ಮೌಲ್ಯಮಾಪನಗಳನ್ನು ಮಾಡುವುದು ಸೇರಿದಂತೆ, ನಿಮ್ಮ ಹಕ್ಕುಗಳು, ಸ್ವಾತಂತ್ರ್ಯಗಳು ಮತ್ತು ಆಸಕ್ತಿಗಳನ್ನು ರಕ್ಷಿಸುವುದಕ್ಕೆ ನಾವು ಕ್ರಮಗಳನ್ನು ಜಾರಿಗೊಳಿಸುತ್ತೇವೆ.

ನಿಮ್ಮ ಕುರಿತು ಈ ರೀತಿಯ ಸ್ವಯಂಚಾಲಿತ ನಿರ್ಧಾರಗಳನ್ನು ನಾವು ಮಾಡಿದಾಗ, ನಿರ್ಧಾರವನ್ನು ಪ್ರಶ್ನಿಸುವ, ನಿಮ್ಮ ದೃಷ್ಟಿಕೋನವನ್ನು ಅಭಿವ್ಯಕ್ತಪಡಿಸುವ ಮತ್ತು ನಿರ್ಧಾರದ ಮಾನವ ವಿಮರ್ಶೆಯನ್ನು ಅಗತ್ಯಪಡಿಸುವ ಹಕ್ಕನ್ನು ನೀವು ಹೊಂದಿರುತ್ತೀರಿ. ಕೆಳಗಿನ "***ನಮ್ಮನ್ನು ಸಂಪರ್ಕಿಸುವುದು ಹೇಗೆ***" ವಿಭಾಗದಡಿ ಒದಗಿಸಿರುವ ಸಂಪರ್ಕ ವಿವರಗಳನ್ನು ಬಳಸಿಕೊಂಡು ನೀವು ಈ ಹಕ್ಕನ್ನು ಚಲಾಯಿಸಬಹುದು.

ನಮ್ಮ ಬಳಕೆಗಾಗಿ ಕಾನೂನು ಆಧಾರ (EEA ಸಂದರ್ಶಕರು ಮಾತ್ರ)

ನೀವು ಯುರೋಪಿಯನ್ ಆರ್ಥಿಕ ಪ್ರದೇಶದಲ್ಲಿದ್ದರೆ, ಮೇಲೆ ವಿವರಿಸಿದ ವೈಯಕ್ತಿಕ ಮಾಹಿತಿಯನ್ನು ಸಂಗ್ರಹಿಸುವುದಕ್ಕೆ ಮತ್ತು ಬಳಸುವುದಕ್ಕೆ ನಮ್ಮ ಕಾನೂನು ಆಧಾರವು ಸಂಬಂಧಿಸಿದ ವೈಯಕ್ತಿಕ ಮಾಹಿತಿ ಮತ್ತು ಅದನ್ನು ನಾವು ಸಂಗ್ರಹಿಸುವ ನಿರ್ದಿಷ್ಟ ಸನ್ನಿವೇಶವನ್ನು ಅವಲಂಬಿಸಿರುತ್ತದೆ.

ಅದಾಗ್ಯೂ, ನಿಮ್ಮ ವೈಯಕ್ತಿಕ ಮಾಹಿತಿಯನ್ನು ಸಂಗ್ರಹಿಸಲು ನಮಗೆ ಅನುಮತಿಯಿರುವಲ್ಲಿ, ನಿಮ್ಮೊಂದಿಗೆ ಕರಾರು ಮಾಡಿಕೊಳ್ಳಲು ನಮಗೆ ವೈಯಕ್ತಿಕ ಮಾಹಿತಿ ಅಗತ್ಯವಿರುವಲ್ಲಿ, ಹಾಗೆ ಮಾಡಲು ನಮಗೆ ಕಾನೂನು ಬಾಧ್ಯತೆಯಿರುವಲ್ಲಿ ಅಥವಾ ಪ್ರಕ್ರಿಯೆಗೊಳಿಸುವಿಕೆಯು ನಮ್ಮ ಕಾನೂನುಬದ್ಧ ಹಿತಾಸಕ್ತಿಯಾಗಿರುವಲ್ಲಿ (ಉದಾಹರಣೆಗೆ ಆಡಳಿತಾತ್ಮಕ ಉದ್ದೇಶಗಳು, ನೇರ ಮಾರ್ಕೆಟಿಂಗ್, ಉತ್ಪನ್ನ ಬೆಳವಣಿಗೆ ಅಥವಾ ಸುಧಾರಣೆ, ವಂಚನೆ ಅಥವಾ ಅಪರಾಧ ಕೃತ್ಯಗಳ ತಡೆಗಟ್ಟುವಿಕೆ ಮತ್ತು ಮಾಹಿತಿ ಭದ್ರತೆಯ ಬೆಂಬಲಿಸುವಿಕೆ) ಮತ್ತು ನಿಮ್ಮ ಡೇಟಾ ರಕ್ಷಣೆ ಹಿತಾಸಕ್ತಿಗಳು ಅಥವಾ ಮೂಲಭೂತ ಹಕ್ಕುಗಳು ಮತ್ತು ಸ್ವಾತಂತ್ರ್ಯಗಳನ್ನು ಉಲ್ಲಂಘಿಸದಿರುವಲ್ಲಿ ಮಾತ್ರ ನಿಮ್ಮಿಂದ ನಾವು ವೈಯಕ್ತಿಕ ಮಾಹಿತಿಯನ್ನು ಸಂಗ್ರಹಿಸುತ್ತೇವೆ.

ಕಾನೂನು ಅಗತ್ಯಗಳೊಂದಿಗೆ ಅನುಸರಣೆಗಾಗಿ ಅಥವಾ ನಿಮ್ಮೊಂದಿಗೆ ಕರಾರು ಮಾಡಿಕೊಳ್ಳುವುದಕ್ಕಾಗಿ ವೈಯಕ್ತಿಕ ಮಾಹಿತಿಯನ್ನು ಒದಗಿಸುವಂತೆ ನಾವು ನಿಮ್ಮನ್ನು ಕೇಳಿದರೆ, ಸಂಗ್ರಹಿಸುವ ಸಂದರ್ಭ ನಾವು ಇದನ್ನು ಸ್ಪಷ್ಟಪಡಿಸುತ್ತೇವೆ. ಆ ಮಾಹಿತಿಗಾಗಿನ ಅಗತ್ಯ ಕಡ್ಡಾಯವಾಗಿದೆಯೇ ಎನ್ನುವುದನ್ನು ಕೂಡ ನಾವು ನಿಮಗೆ ತಿಳಿಸುತ್ತೇವೆ ಮತ್ತು ಒಂದು ವೇಳೆ ನೀವು ಮಾಹಿತಿಯನ್ನು ಒದಗಿಸದಿದ್ದರೆ ಉಂಟಾಗಬಹುದಾದ ಯಾವುದೇ ಪರಿಣಾಮಗಳನ್ನು ನಿಮಗೆ ವಿವರಿಸುತ್ತೇವೆ.

ಅದೇ ರೀತಿ, ನಮ್ಮ (ಅಥವಾ ಯಾವುದೇ ತೃತೀಯ ಪಕ್ಷದ) ಕಾನೂನುಬದ್ಧ ಹಿತಾಸಕ್ತಿಗಳನ್ನು ಆಧರಿಸಿ ನಾವು ನಿಮ್ಮ ವೈಯಕ್ತಿಕ ಮಾಹಿತಿಯನ್ನು ಸಂಗ್ರಹಿಸಿದರೆ ಮತ್ತು ಬಳಸಿದರೆ, ಸ್ಪಷ್ಟ ಸೂಚನೆಯನ್ನು ಒದಗಿಸಲು ಮತ್ತು ನಮ್ಮ ಕಾನೂನುಬದ್ಧ ಹಿತಾಸಕ್ತಿಗಳನ್ನು ವಿವರಿಸಲು ನಾವು ಸಮಂಜಸ ಕ್ರಮಗಳನ್ನು ಕೈಗೊಳ್ಳುತ್ತೇವೆ.

ಪೂರಕ ಗೌಪ್ಯತೆ ಸೂಚನೆ ಬೇರೆ ರೀತಿ ಹೇಳಿರುವುದನ್ನು ಹೊರತುಪಡಿಸಿ, Intel Corporation, EEA ನಲ್ಲಿ ಸಂಗ್ರಹಿಸಿದ ಎಲ್ಲ ವೈಯಕ್ತಿಕ ಮಾಹಿತಿಯ ಡೇಟಾ ನಿಯಂತ್ರಕನಾಗಿದೆ. Intel Corporation ಗಾಗಿ ಸಂಪರ್ಕ ಮಾಹಿತಿಯನ್ನು "***ನಮ್ಮನ್ನು ಸಂಪರ್ಕಿಸುವುದು ಹೇಗೆ***" ವಿಭಾಗದಲ್ಲಿ ತಿಳಿಸಲಾಗಿದೆ.

ಯಾವುದೇ ನಿರ್ದಿಷ್ಟ ಪ್ರಕ್ರಿಯೆಗೊಳಿಸುವಿಕೆ ಚಟುವಟಿಕೆಗಾಗಿ ನಿಮ್ಮ ವೈಯಕ್ತಿಕ ಮಾಹಿತಿಯನ್ನು ನಾವು ಹೇಗೆ ಸಂಗ್ರಹಿಸುತ್ತೇವೆ ಮತ್ತು ಬಳಸುತ್ತೇವೆ ಎನ್ನುವ ಕುರಿತ ಕಾನೂನು

ಆಧಾರಕ್ಕೆ ಸಂಬಂಧಿಸಿ ನಿಮ್ಮಲ್ಲಿ ಪ್ರಶ್ನೆಗಳಿದ್ದರೆ ಅಥವಾ ಹೆಚ್ಚುವರಿ ಮಾಹಿತಿ ಅಗತ್ಯವಿದ್ದರೆ, ದಯವಿಟ್ಟು ಕೆಳಗಿನ "***ನಮ್ಮನ್ನು ಸಂಪರ್ಕಿಸುವುದು ಹೇಗೆ***" ವಿಭಾಗದಡಿ ಒದಗಿಸಿರುವ ಸಂಪರ್ಕ ವಿವರಗಳನ್ನು ಬಳಸಿಕೊಂಡು ನಮ್ಮನ್ನು ಸಂಪರ್ಕಿಸಿ.

## ನಾವು ಮಾಹಿತಿಯನ್ನು ಹೇಗೆ ಹಂಚಿಕೊಳ್ಳುತ್ತೇವೆ

ಕೆಲವು Intel Services ಒದಗಿಸಲು ನಾವು ನಮ್ಮ ಅಂಗಸಂಸ್ಥೆಗಳ ಮೂಲಕ ಕೆಲಸ ಮಾಡುತ್ತೇವೆ. ನಾವು ಅಧಿಕೃತ ಪೂರೈಕೆದಾರರು ಮತ್ತು ವ್ಯವಹಾರ ಪಾಲುದಾರರ ಜೊತೆಗೂ ಕೆಲಸ ಮಾಡುತ್ತೇವೆ. ಈ ಕಂಪನಿಗಳ ಜೊತೆಗೆ ನಾವು ನಿಮ್ಮ ವೈಯಕ್ತಿಕ ಮಾಹಿತಿಯನ್ನು ಹಂಚಿಕೊಂಡಾಗ, ಈ ಗೌಪ್ಯತೆ ಸೂಚನೆ ಹಾಗೂ ಸೂಕ್ತ ಗೋಪನೀಯತೆ ಮತ್ತು ಭದ್ರತೆ ಕ್ರಮಗಳೊಂದಿಗೆ ಅನುಸರಣೆ ಹೊಂದಿರುವ ಕಾನೂನು ಮತ್ತು ಅಧಿಕೃತ ಉದ್ದೇಶಗಳಿಗಾಗಿ ಮಾತ್ರ ನಿಮ್ಮ ಮಾಹಿತಿಯ ಬಳಕೆಯನ್ನು ಮಿತಿಗೊಳಿಸಲು ನಾವು ಸೂಕ್ತ ಕ್ರಮಗಳನ್ನು ಜಾರಿಗೊಳಿಸುತ್ತೇವೆ. ಉದಾಹರಣೆಗೆ, ಒಂದು ಖರೀದಿ ವಹಿವಾಟನ್ನು ಪೂರ್ಣಗೊಳಿಸಲು ಅಥವಾ ನೀವು ವಿನಂತಿಸಿದ ಬೆಂಬಲದಂತಹ Intel Services ಒದಗಿಸಲು ನಾವು ನಮ್ಮ ಅಂಗಸಂಸ್ಥೆಗಳು ಮತ್ತು ನಮ್ಮ ಮರುಮಾರಾಟಗಾರರಂತಹ ಪಾಲುದಾರರ ಮೇಲೆ ಅವಲಂಬಿತರಾಗಿದ್ದೇವೆ.

ಜಾಹೀರಾತು ನೀಡುವಿಕೆ ಮತ್ತು ಮಾರ್ಕೆಟಿಂಗ್‌ಗಾಗಿ; ಕಾನೂನಿನಿಂದ ಅಗತ್ಯಪಡಿಸಿದಾಗ ಅಥವಾ ಕಾನೂನು ವಿಚಾರಣೆಗೆ ಪ್ರತಿಸ್ಪಂದಿಸಲು; ನಮ್ಮ ಗ್ರಾಹಕರನ್ನು ರಕ್ಷಿಸಲು; ಜೀವಗಳನ್ನು ರಕ್ಷಿಸಲು; Intel Services ನ ಭದ್ರತೆಯನ್ನು ಕಾಪಾಡಲು; ಮತ್ತು ನಮ್ಮ ಕಾನೂನು ಹಕ್ಕುಗಳನ್ನು ರಕ್ಷಿಸಲು ಕೂಡ ನಾವು ತೃತೀಯ ಪಕ್ಷಗಳೊಂದಿಗೆ ಮಾಹಿತಿಯನ್ನು ಹಂಚಿಕೊಳ್ಳುತ್ತೇವೆ.

### ಅಂಗಸಂಸ್ಥೆಗಳು ಮತ್ತು ಅಧೀನ ಸಂಸ್ಥೆಗಳೊಂದಿಗೆ

ಈ ಗೌಪ್ಯತೆ ಸೂಚನೆ ಸೀಮಿತವಾಗಿರುವ ಮತ್ತು ಇದರೊಂದಿಗೆ ಅನುಸರಣೆ ಹೊಂದಿರುವ ಉದ್ದೇಶಗಳಿಗಾಗಿ. ಹೆಚ್ಚಿನ ಮಾಹಿತಿಗಾಗಿ, Intel ಯುರೋಪಿಯನ್ ಆರ್ಥಿಕ ಪ್ರದೇಶಕ್ಕೆ (EEA) ಅನ್ವಯಿಸುವ ಕಾರ್ಪೊರೇಟ್ ನಿಯಮಗಳನ್ನು (BCRs) ಇಲ್ಲಿ ಆ್ಯಕ್ಸೆಸ್ ಮಾಡಬಹುದು ಮತ್ತು Intel ಯುನೈಟೆಡ್ ಕಿಂಗ್‌ಡಮ್ (UK) BCR ಗಳನ್ನು ಇಲ್ಲಿ ಆ್ಯಕ್ಸೆಸ್ ಮಾಡಬಹುದು.

### ಪೂರೈಕೆದಾರರೊಂದಿಗೆ

ಉತ್ಪನ್ನ ಡೆಲಿವರಿ, ವೆಬ್‌ಸೈಟ್ ಹೋಸ್ಟಿಂಗ್, ಡೇಟಾ ವಿಶ್ಲೇಷಣೆ, IT ಸೇವೆಗಳು, ಆಡಿಟಿಂಗ್, ಪಾವತಿ ಪ್ರಕ್ರಿಯೆಗೊಳಿಸುವಿಕೆ ಅಥವಾ ಗ್ರಾಹಕ ಸೇವೆಯಂತಹ ನಾವು ಕರಾರು ಮಾಡಿಕೊಂಡಿರುವ ಸೇವೆಗಳನ್ನು ಒದಗಿಸಲು ನಮ್ಮ ಅಧಿಕೃತ ಮಾರಾಟಗಾರರು ಮತ್ತು ಪೂರೈಕೆದಾರರಿಗೆ ವೈಯಕ್ತಿಕ ಮಾಹಿತಿ ಬೇಕಾಗಬಹುದು. Intelಲ್ಲಿ ನಾವು ವಿಶಾಲ ವೈವಿಧ್ಯದ ಸಾಫ್ಟ್‌ವೇರ್ ಮತ್ತು ಟೂಲ್‌ಗಳನ್ನು ಬಳಸುತ್ತೇವೆ ಮತ್ತು ವ್ಯವಹಾರದ ರೂಢಿಗತ ಕಾರ್ಯಾಚರಣೆಯಾಗಿ ಈ ಟೂಲ್‌ಗಳನ್ನು ಬಳಸಿಕೊಂಡು ನಾವು ವೈಯಕ್ತಿಕ ಮಾಹಿತಿಯನ್ನು ಪ್ರಕ್ರಿಯೆಗೊಳಿಸುತ್ತೇವೆ. ಪೂರೈಕೆದಾರರು ಮತ್ತು ಮಾರಾಟಗಾರರೊಂದಿಗಿನ ನಮ್ಮ ಕರಾರು, ನಿಮ್ಮ ಮಾಹಿತಿಯನ್ನು ರಕ್ಷಿಸಲು ಮತ್ತು ಅದರ ಬಳಕೆಯನ್ನು ಮಿತಿಗೊಳಿಸಲು ನಿಬಂಧನೆಗಳನ್ನು ಒಳಗೊಂಡಿದೆ.

ವಿಶ್ಲೇಷಣೆ, ನಮ್ಮ ಉತ್ಪನ್ನಗಳ ಪ್ರದೇಶದಲ್ಲಿನ ಪ್ರವೃತ್ತಿಗಳನ್ನು ಗುರುತಿಸುವಿಕೆ ಮತ್ತು ಸಂಶೋಧನೆ ನಡೆಸುವುದು ಹಾಗೂ ಹೊಸ Intel® Services ಅನ್ನು ಅಭಿವೃದ್ಧಿಸುವಂತಹ ಉದ್ದೇಶಗಳಿಗಾಗಿ ಪೂರೈಕೆದಾರರೊಂದಿಗೆ, ಅನಾಮಧೇಯಗೊಳಿಸಿದ ಅಥವಾ ಒಟ್ಟುಗೂಡಿಸಿದ

ಮಾಹಿತಿಯಂತಹ ವೈಯಕ್ತಿಕವಾಗಿ ಗುರುತಿಸಲಾಗದ ಮಾಹಿತಿಯನ್ನು ಕೂಡ ನಾವು ಹಂಚಿಕೊಳ್ಳುತ್ತೇವೆ.

### ಪಾಲುದಾರರೊಂದಿಗೆ

ಜಂಟಿ ಉತ್ಪನ್ನಗಳು ಅಥವಾ ಸಂಶೋಧನಾ ಅಧ್ಯಯನಗಳನ್ನು ನಡೆಸಲು ಅಥವಾ ಮೆಸೇಜ್ ಬೋರ್ಡ್‌ಗಳು, ಬ್ಲಾಗ್‌ಗಳು ಅಥವಾ ಇತರ ಹಂಚಿಕೊಂಡ ವೇದಿಕೆಗಳಂತಹ ಸೇವೆಗಳನ್ನು ಒದಗಿಸಲು, ಪೂರೈಕೆದಾರರು ಅಥವಾ ಮಾರಾಟಗಾರರಲ್ಲದ ಆದರೆ ಸ್ವೀಪ್‌ಸ್ಟೇಕ್‌ಗಳು, ಸ್ಪರ್ಧೆಗಳು ಮತ್ತು ಅದೇ ರೀತಿಯ ಪ್ರಚಾರಗಳಂತಹ ಕೆಲವು ಅವಕಾಶಗಳನ್ನು ಒದಗಿಸಲು ನಮ್ಮೊಂದಿಗೆ ಕೆಲಸ ಮಾಡುವ ತೃತೀಯ ಪಕ್ಷಗಳೊಂದಿಗೆ ನಾವು ಸಾಂದರ್ಭಿಕವಾಗಿ ಕೈಜೋಡಿಸುತ್ತೇವೆ. ಈ ಸನ್ನಿವೇಶಗಳಲ್ಲಿ, ಹೆಚ್ಚುವರಿ ನಿಯಮಗಳು ಅಥವಾ ಗೌಪ್ಯತೆ ಸೂಚನೆಗಳನ್ನು ಒದಗಿಸಬಹುದು. ತೃತೀಯ ಪಕ್ಷಗಳಿಗಾಗಿ ಅಥವಾ ಈ ಸೂಚನೆಯಲ್ಲಿ ವಿವರಿಸಿಲ್ಲದ ಬಳಕೆಗಳಿಗಾಗಿ, ನಿಮ್ಮ ಮಾಹಿತಿ ಹಂಚಿಕೊಳ್ಳಲು ಕಾನೂನುಬದ್ಧ ಆಧಾರವಿದ್ದಾಗ ಮಾತ್ರ ನಾವು ಹಂಚಿಕೊಳ್ಳುತ್ತೇವೆ.

### ಜಾಹೀರಾತು ನೀಡುವಿಕೆ ಮತ್ತು ಮಾರ್ಕೆಟಿಂಗ್‌ಗಾಗಿ

ಜಾಹೀರಾತು ನೀಡುವಿಕೆ ಮತ್ತು ಮಾರ್ಕೆಟಿಂಗ್ ಕಂಟೆಂಟ್ ಅನ್ನು ಸಿದ್ಧಪಡಿಸಲು ಮತ್ತು ತಲುಪಿಸಲು, ಕಂಟೆಂಟ್ ಸೇವೆಗಳನ್ನು ಒದಗಿಸಲು ಮತ್ತು ನಿಮಗೆ ಇನ್ನಷ್ಟು ವೈಯಕ್ತಿಕಗೊಳಿಸಿದ ಜಾಹೀರಾತುಗಳನ್ನು ಒದಗಿಸಲು ಮತ್ತು ನಮ್ಮ ಅಭಿಯಾನಗಳ ಪರಿಣಾಮಕಾರತ್ವವನ್ನು ಅಧ್ಯಯನ ಮಾಡಲು ಅವರಿಗೆ ಸಾಧ್ಯವಾಗುವಂತೆ ಮಾಡುವುದಕ್ಕಾಗಿ ನಮ್ಮ ತೃತೀಯ ಪಕ್ಷದ ಕಂಪನಿ ಪಾಲುದಾರರೊಂದಿಗೆ ನಾವು ನಿಮ್ಮ ಮಾಹಿತಿಯನ್ನು ಹಂಚಿಕೊಳ್ಳುತ್ತೇವೆ.

ನಿರ್ದಿಷ್ಟವಾಗಿ, ನಿಮ್ಮ ಆದ್ಯತೆಗಳ ಅನುಸಾರ, ನೀವು ಆಸಕ್ತಿ ಹೊಂದಿರಬಹುದಾದ ಸರಕುಗಳು ಮತ್ತು ಸೇವೆಗಳಿಗೆ ಸಂಬಂಧಿಸಿದಂತೆ ಸಂವಹನ ನಡೆಸಲು ನಾವು ತೃತೀಯ ಪಕ್ಷದ ಕಂಪನಿಗಳನ್ನು ಬಳಸುತ್ತೇವೆ. ಇಮೇಲ್, ಫೋನ್ ಮುಂತಾದ ವಿವಿಧ ವಿಧಾನಗಳ ಮೂಲಕ ಅಥವಾ ನೀವು Intel® Services ಮತ್ತು ಇತರ ವೆಬ್‌ಸೈಟ್ ಅನ್ನು ಪ್ರವೇಶಿಸಿದಾಗ ಮತ್ತು ಬಳಸಿದಾಗ ಈ ಕಂಟೆಂಟ್ ಅನ್ನು ನೀವು ಸ್ವೀಕರಿಸಬಹುದು. ಉದಾಹರಣೆಗೆ, ಹಿಂದಿನ ಖರೀದಿಗಳು ಅಥವಾ ವಹಿವಾಟುಗಳ ಮೂಲಕ, ನಿಮ್ಮ ಸಾಧನದ ಭೌತಿಕ ಸ್ಥಳದ ಮೂಲಕ, ನೀವು ಯಾವ ಜಾಹೀರಾತುಗಳನ್ನು ಮತ್ತು ಕಂಟೆಂಟ್ ಅನ್ನು ನೋಡಿದ್ದೀರಿ ಎನ್ನುವ ಮಾಹಿತಿಯ ಮೂಲಕ ಅಥವಾ Intel® Services ಮತ್ತು ಇತರ ವೆಬ್‌ಸೈಟ್‌ಗಳಿಗೆ ನಿಮ್ಮ ಪ್ರವೇಶ ಮತ್ತು ಅವುಗಳ ಬಳಕೆಗೆ ಸಂಬಂಧಿಸಿದ ಕುಕೀಗಳು ಮತ್ತು ಅದೇ ರೀತಿಯ ತಂತ್ರಜ್ಞಾನಗಳ ಮೂಲಕ ಪಡೆದ ಮಾಹಿತಿಯನ್ನು ಕಂಟೆಂಟ್ ಆಧರಿಸಿರಬಹುದು. ಹೆಚ್ಚಿನ ಮಾಹಿತಿಗಾಗಿ ದಯವಿಟ್ಟು ನಮ್ಮ Intel ಕುಕೀಗಳು ಮತ್ತು ಅದೇ ರೀತಿಯ ತಂತ್ರಜ್ಞಾನಗಳ ಸೂಚನೆ ಅನ್ನು ಓದಿ. ನಿಮ್ಮ ಸಾಧನದ ಸೆಟ್ಟಿಂಗ್‌ಗಳನ್ನು ಬದಲಾಯಿಸುವ ಮೂಲಕ ನಿಮ್ಮ ಸಾಧನದ ಸ್ಥಳದ ಬಳಕೆ ಮತ್ತು/ಅಥವಾ ಹಂಚಿಕೊಳ್ಳುವಿಕೆಗೆ ಅನುಮತಿಸಬೇಕೇ ಅಥವಾ ನಿರಾಕರಿಸಬೇಕೇ ಎನ್ನುವುದನ್ನು ನೀವು ಆಯ್ಕೆ ಮಾಡಬಹುದು, ಆದರೆ ಅಂತಹ ಬಳಕೆಗಳು ಅಥವಾ ಹಂಚಿಕೊಳ್ಳುವಿಕೆಯನ್ನು ನಿರಾಕರಿಸಲು ನೀವು ಆಯ್ಕೆ ಮಾಡಿಕೊಂಡರೆ, ಅನ್ವಯಿಸುವ ವೈಯಕ್ತಿಕಗೊಳಿಸಿದ Intel® Services ಮತ್ತು ಕಂಟೆಂಟ್ ಅನ್ನು ನಿಮಗೆ ಒದಗಿಸಲು ನಮ್ಮ ಪಾಲುದಾರರಿಗೆ ಸಾಧ್ಯವಾಗದಿರಬಹುದು.

ಅಂಗಸಂಸ್ಥೆಯಲ್ಲದ ತೃತೀಯ ಪಕ್ಷಗಳೊಂದಿಗೆ ಅವರ ಸ್ವಂತ ಜಾಹೀರಾತು ನೀಡುವಿಕೆ ಅಥವಾ ಮಾರ್ಕೆಟಿಂಗ್ ಬಳಕೆಗಾಗಿ ನಿಮ್ಮ ಅನುಮತಿಯಿಲ್ಲದೆ ನಿಮ್ಮ ವೈಯಕ್ತಿಕ ಮಾಹಿತಿಯನ್ನು Intel ಹಂಚಿಕೊಳ್ಳುವುದಿಲ್ಲ.

ನಮ್ಮ ಜಾಹೀರಾತು ನೀಡುವಿಕೆ ಮತ್ತು ಮಾರ್ಕೆಟಿಂಗ್ ಅನ್ನು ನಿರಾಕರಿಸುವುದು ಹೇಗೆ ಎನ್ನುವ ಕುರಿತ ಮಾಹಿತಿಗಾಗಿ, ದಯವಿಟ್ಟು ಕೆಳಗಿನ "ನಿಮ್ಮ ಆಯ್ಕೆಗಳು ಮತ್ತು ಹಕ್ಕುಗಳು" ಶೀರ್ಷಿಕೆಯ ವಿಭಾಗವನ್ನು ನೋಡಿ.

### ಮಾರಾಟಗಳು, ವಿಲೀನಗಳು ಮತ್ತು ಸ್ವಾಧೀನಗಳು

ಮರುಸಂಘಟನೆ, ವಿಲೀನ, ಮಾರಾಟ, ಜಂಟಿ ಉದ್ಯಮ, ನಿಯೋಜನೆ, ವರ್ಗಾವಣೆ ಅಥವಾ ನಮ್ಮ ಎಲ್ಲ ವ್ಯವಹಾರ, ಸ್ವತ್ತು ಅಥವಾ ಷೇರುಗಳು ಅಥವಾ ಯಾವುದೇ ಭಾಗದ ಇತರ ಇತ್ಯರ್ಥದಂತಹ (ದಿವಾಳಿತನ ಅಥವಾ ಅದೇ ರೀತಿಯ ನಡಾವಳಿಗಳೊಂದಿಗೆ ಸಂಬಂಧಿಸಿದವು ಸೇರಿದಂತೆ) ಯೋಜಿಸಿದ ಅಥವಾ ನೈಜ ಕಾರ್ಪೊರೇಟ್ ವಹಿವಾಟಿನ ಭಾಗವಾಗಿ ನಾವು ವೈಯಕ್ತಿಕ ಮಾಹಿತಿಯನ್ನು ಬಹಿರಂಗಪಡಿಸಬಹುದು.

### ಸಂಶೋಧನೆ ಮತ್ತು ಅಧ್ಯಯನ

ನಮ್ಮ ತಂತ್ರಜ್ಞಾನವನ್ನು ಸುಧಾರಿಸಲು ಸಂಶೋಧನೆ ನಡೆಸುವುದಕ್ಕಾಗಿ ಅಥವಾ ಅಧ್ಯಯನದ ವಿವಿಧ ಕ್ಷೇತ್ರಗಳಲ್ಲಿ ನಮ್ಮ ತಂತ್ರಜ್ಞಾನವನ್ನು ಬಳಸುವುದಕ್ಕಾಗಿ ಮತ್ತು ಹೊಸ ಬಳಕೆಗಳನ್ನು ಗುರುತಿಸುವುದಕ್ಕಾಗಿ ಅಥವಾ ಹೊಸ ಉತ್ಪನ್ನಗಳನ್ನು ವಿನ್ಯಾಸ ಮಾಡುವುದಕ್ಕಾಗಿ ಸಹಭಾಗಿತ್ವದ ಪಾಲುದಾರರಿಗೆ ವೈಯಕ್ತಿಕ ಮಾಹಿತಿಯನ್ನು ನಾವು ಬಹಿರಂಗಪಡಿಸಬಹುದು.

### ನಿಮ್ಮ ಸಮ್ಮತಿಯೊಂದಿಗೆ

ಬಹಿರಂಗಪಡಿಸುವಿಕೆಗೆ ನೀವು ಸಮ್ಮತಿಸಿರುವಲ್ಲಿ ಯಾವುದೇ ಇತರ ವ್ಯಕ್ತಿ ಅಥವಾ ಸಂಸ್ಥೆಗೆ ನಿಮ್ಮ ವೈಯಕ್ತಿಕ ಮಾಹಿತಿಯನ್ನು Intel ಬಹಿರಂಗಪಡಿಸಬಹುದು.

## ನಿಮ್ಮ ಆಯ್ಕೆಗಳು ಮತ್ತು ಹಕ್ಕುಗಳು

ನಿಮ್ಮ ವೈಯಕ್ತಿಕ ಮಾಹಿತಿಯನ್ನು ಹೇಗೆ ಬಳಸಲಾಗುತ್ತದೆ ಮತ್ತು ಹಂಚಿಕೊಳ್ಳಲಾಗುತ್ತದೆ ಎನ್ನುವುದಕ್ಕೆ ಸಂಬಂಧಿಸಿ ನಿಮ್ಮ ಹಕ್ಕುಗಳನ್ನು Intel ಗೌರವಿಸುತ್ತದೆ. ನಿಮ್ಮ ವೈಯಕ್ತಿಕ ಡೇಟಾಗೆ ಪ್ರವೇಶಿಸುವಿಕೆಗೆ ಅಥವಾ ತಿದ್ದುಪಡಿಗಳಿಗೆ ನೀವು ವಿನಂತಿಸಬಹುದು ಅಥವಾ ನೀವು ಸ್ವೀಕರಿಸುವ ಮಾರ್ಕೆಟಿಂಗ್ ಸಾಮಗ್ರಿಗಳ ವಿಧಗಳ ಕುರಿತು ಆಯ್ಕೆಗಳನ್ನು ಮಾಡಬಹುದು (ಅಥವಾ Intel ಇಂದ ಯಾವುದೇ ಮಾರ್ಕೆಟಿಂಗ್‌ಗಳನ್ನು ಸ್ವೀಕರಿಸದೆ ಇರಲು ಆಯ್ಕೆ ಮಾಡಬಹುದು). ನೀವು ಯುರೋಪ್‌ನಲ್ಲಿದ್ದರೆ, GDPR ಅಡಿಯಲ್ಲಿ ನೀವು ಹೆಚ್ಚುವರಿ ಹಕ್ಕುಗಳನ್ನು ಹೊಂದಿರಬಹುದು. ನೀವು ಯಾವ Intel® Services ಬಳಸುತ್ತಿದ್ದೀರಿ ಎನ್ನುವುದನ್ನು ಅವಲಂಬಿಸಿ ಹೆಚ್ಚುವರಿ ಆಯ್ಕೆಗಳು ಮತ್ತು ಹಕ್ಕುಗಳು ಲಭ್ಯವಿರಬಹುದು.

### ನಿಮ್ಮ ಮಾಹಿತಿಗೆ ಪ್ರವೇಶ, ತಿದ್ದುಪಡಿ ಅಥವಾ ಅದನ್ನು ಅಳಿಸುವಿಕೆ

ನೀವು ನಿಮ್ಮ ವೈಯಕ್ತಿಕ ಮಾಹಿತಿಯನ್ನು ಸರಿಪಡಿಸಲು ಅಥವಾ ತಿದ್ದುಪಡಿ ಮಾಡಲು ಅಥವಾ ನಿಮ್ಮ ವೈಯಕ್ತಿಕ ಮಾಹಿತಿಯನ್ನು ಪ್ರವೇಶಿಸಲು ಅಥವಾ ಅಳಿಸಲು ವಿನಂತಿಸಲು ಬಯಸಿದರೆ, ನಿರ್ದಿಷ್ಟ ಉತ್ಪನ್ನ ಅಥವಾ ಸೇವೆಯ ವೆಬ್‌ಸೈಟ್‌ಗೆ ಭೇಟಿ ನೀಡುವ ಮೂಲಕ ಅಥವಾ ಕೆಳಗಿನ "*ನಮ್ಮನ್ನು ಸಂಪರ್ಕಿಸುವುದು ಹೇಗೆ*" ವಿಭಾಗದಡಿ ಒದಗಿಸಿರುವ ಸಂಪರ್ಕ ವಿವರಗಳನ್ನು ಬಳಸುವ ಮೂಲಕ ನೀವು ನಮ್ಮನ್ನು ಸಂಪರ್ಕಿಸಬಹುದು. ನಿಮ್ಮ ವೈಯಕ್ತಿಕ ಮಾಹಿತಿಗೆ ಬದಲಾವಣೆ ಮಾಡಲು ಅಥವಾ ಅದನ್ನು ಅಳಿಸುವಂತೆ ನೀವು ವಿನಂತಿಸಿದರೆ, ರೆಕಾರ್ಡ್ ಇರಿಸಿಕೊಳ್ಳುವಿಕೆ ಉದ್ದೇಶಗಳಿಗಾಗಿ ಮತ್ತು/ಅಥವಾ ಅಂತಹ ಬದಲಾವಣೆ ಮತ್ತು ಅಳಿಸುವಿಕೆಯನ್ನು ವಿನಂತಿಸುವುದಕ್ಕೆ ಮುಂಚೆ ನೀವು ಆರಂಭಿಸಿದ ಯಾವುದೇ ವಹಿವಾಟನ್ನು ಪೂರ್ಣಗೊಳಿಸುವುದಕ್ಕಾಗಿ, ಆನಂತರವೂ ನಾವು ಕೆಲವು ಮಾಹಿತಿಯನ್ನು

ಉಳಿಸಿಕೊಳ್ಳಬೇಕಾಗಬಹುದು ಎನ್ನುವುದನ್ನು ದಯವಿಟ್ಟು ಗಮನಿಸಿ (ಉದಾ., ನೀವು ಒಂದು ಖರೀದಿಯನ್ನು ಮಾಡಿದಾಗ ಅಥವಾ ಒಂದು ಪ್ರಮೋಷನ್‌ಗೆ ಸೇರಿದಾಗ, ಅಂತಹ ಖರೀದಿ ಅಥವಾ ಪ್ರಮೋಷನ್ ಪೂರ್ಣಗೊಳ್ಳುವ ತನಕ ವೈಯಕ್ತಿಕ ಮಾಹಿತಿಯನ್ನು ಬದಲಾಯಿಸಲು ಅಥವಾ ಅಳಿಸಲು ನಿಮಗೆ ಸಾಧ್ಯವಾಗದಿರಬಹುದು). ಅನ್ವಯಿಸುವ ಕಾನೂನಿನೊಂದಿಗೆ ಅನುಸರಣೆಗಾಗಿ ಅವಶ್ಯಕವಿರುವಲ್ಲಿ ನಿಮ್ಮ ಒಂದಿಷ್ಟು ಮಾಹಿತಿ ನಮ್ಮ ಸಿಸ್ಟಂಗಳ ಒಳಗೆ ಮತ್ತು ಇತರ ರೆಕಾರ್ಡ್‌ಗಳಲ್ಲಿ ಕೂಡ ಉಳಿಯಬಹುದು.

ನಿಮ್ಮ ವಿನಂತಿಯ ಮೇರೆಗೆ ಮತ್ತು ಹಾಗೆ ಮಾಡುವಂತೆ ಕಾನೂನು ನಮಗೆ ಅಗತ್ಯಪಡಿಸುವಲ್ಲಿ, ನಾವು ನಿಮ್ಮ ಕುರಿತು ಯಾವ ವೈಯಕ್ತಿಕ ಮಾಹಿತಿಯನ್ನು ಇರಿಸಿಕೊಂಡಿದ್ದೇವೆ ಎನ್ನುವುದನ್ನು ನಾವು ದೃಢಪಡಿಸುತ್ತೇವೆ. ನಿಮ್ಮ ವೈಯಕ್ತಿಕ ಮಾಹಿತಿಯ ಪ್ರತಿಯನ್ನು ಪಡೆಯುವ ಕಾನೂನು ಹಕ್ಕನ್ನು ಕೂಡ ನೀವು ಹೊಂದಿರಬಹುದು. ಕೆಳಗಿನ "***ನಮ್ಮನ್ನು ಸಂಪರ್ಕಿಸುವುದು ಹೇಗೆ***" ವಿಭಾಗದಲ್ಲಿ ವಿವರಿಸಿರುವ ವಿಧಾನಗಳಲ್ಲಿ ಒಂದರಲ್ಲಿ ಲಿಖಿತ ವಿನಂತಿಯನ್ನು ಸಲ್ಲಿಸುವ ಮೂಲಕ ನೀವು ಅಂತಹ ವಿನಂತಿಯನ್ನು ಮಾಡಬಹುದು. ಕಾನೂನಿನಿಂದ ಅನುಮತಿಸಿರುವಲ್ಲಿ ಈ ಸೇವೆಗಾಗಿ ನಾವು ಪ್ರಕ್ರಿಯೆಗೊಳಿಸುವಿಕೆ ಶುಲ್ಕವನ್ನು ವಿಧಿಸಬಹುದು ಮತ್ತು ನಿಮ್ಮ ವಿನಂತಿಯನ್ನು ಪೂರೈಸುವುದಕ್ಕೆ ಮೊದಲು ನಿಮ್ಮ ಗುರುತಿನ ಪುರಾವೆ ನಮಗೆ ಬೇಕಾಗುತ್ತದೆ.

### ಯುರೋಪಿಯನ್ ಆರ್ಥಿಕ ಪ್ರದೇಶದ ನಿವಾಸಿಗಳಿಗೆ ನಿರ್ದಿಷ್ಟವಾದ ಡೇಟಾ ಗೌಪ್ಯತೆ ಹಕ್ಕುಗಳು

ನೀವು EEA ನಲ್ಲಿದ್ದರೆ, ನಿಮ್ಮ ವೈಯಕ್ತಿಕ ಮಾಹಿತಿಯ ಪ್ರಕ್ರಿಯೆಗೊಳಿಸುವಿಕೆಗೆ ನೀವು ಆಕ್ಷೇಪ ವ್ಯಕ್ತಪಡಿಸಬಹುದು, ನಿಮ್ಮ ವೈಯಕ್ತಿಕ ಮಾಹಿತಿಯ ಪ್ರಕ್ರಿಯೆಯನ್ನು ನಿರ್ಬಂಧಿಸುವಂತೆ ನಮ್ಮನ್ನು ಕೇಳಬಹುದು ಅಥವಾ ನಿಮ್ಮ ವೈಯಕ್ತಿಕ ಮಾಹಿತಿಯ ಪೋರ್ಟೆಬಿಲಿಟಿಗೆ ವಿನಂತಿಸಬಹುದು. ಕೆಳಗಿನ "***ನಮ್ಮನ್ನು ಸಂಪರ್ಕಿಸುವುದು ಹೇಗೆ***" ವಿಭಾಗದಲ್ಲಿ ವಿವರಿಸಿರುವ ಒಂದು ವಿಧಾನದಲ್ಲಿ ಲಿಖಿತ ವಿನಂತಿಯನ್ನು ಮಾಡುವ ಮೂಲಕ ಈ ಹಕ್ಕುಗಳನ್ನು ನೀವು ಚಾಲಯಿಸಬಹುದು.

ಅದೇ ರೀತಿ, ನಾವು ನಿಮ್ಮ ಸಮ್ಮತಿಯೊಂದಿಗೆ ನಿಮ್ಮ ಮಾಹಿತಿಯನ್ನು ಸಂಗ್ರಹಿಸಿದ್ದರೆ, ಯಾವುದೇ ಸಮಯದಲ್ಲಿ ನೀವು ನಿಮ್ಮ ಸಮ್ಮತಿಯನ್ನು ಹಿಂಪಡೆಯಬಹುದು. ನಿಮ್ಮ ಸಮ್ಮತಿಯನ್ನು ಹಿಂಪಡೆಯುವುದರಿಂದ (1) ನಿಮ್ಮ ಹಿಂಪಡೆಯುವಿಕೆಗೆ ಮುನ್ನ ನಾವು ನಡೆಸಿದ ಯಾವುದೇ ಪ್ರಕ್ರಿಯೆಗೊಳಿಸುವಿಕೆಯ ಕಾನೂನುಬದ್ಧತೆ ಅಥವಾ (2) ಇತರ ಕಾನೂನು ಆಧಾರಗಳಡಿಯಲ್ಲಿ ನಿಮ್ಮ ವೈಯಕ್ತಿಕ ಮಾಹಿತಿಯ ಪ್ರಕ್ರಿಯೆಗೊಳಿಸುವಿಕೆಯ ಮೇಲೆ ಪರಿಣಾಮವಾಗುವುದಿಲ್ಲ.

ಈ ಗೌಪ್ಯತೆ ಸೂಚನೆಗೆ ಅನುಸರಣೆ ಹೊಂದಿಲ್ಲದ ವಿಧಾನದಲ್ಲಿ ನಾವು ನಿಮ್ಮ ವೈಯಕ್ತಿಕ ಮಾಹಿತಿಯನ್ನು ಬಳಸುತ್ತಿದ್ದೇವೆ ಎಂದು ನೀವು ಭಾವಿಸಿದರೆ ಅಥವಾ ನಿಮ್ಮ ಹಕ್ಕುಗಳ ಕುರಿತ ಹೆಚ್ಚಿನ ಮಾಹಿತಿಗಾಗಿ, ನಿಮ್ಮ ಸ್ಥಳೀಯ ಡೇಟಾ ರಕ್ಷಣೆ ಅಧಿಕಾರಿಯನ್ನು ಸಂಪರ್ಕಿಸಿ (ಯುರೋಪಿಯನ್ ಆರ್ಥಿಕ ಪ್ರದೇಶದಲ್ಲಿನ ಡೇಟಾ ರಕ್ಷಣಾ ಅಧಿಕಾರಿಗಳ ಸಂಪರ್ಕ ವಿವರಗಳು ಇಲ್ಲಿ ಲಭ್ಯ ಇವೆ.)

### ಜಾಹೀರಾತು ನೀಡುವಿಕೆ ಮತ್ತು ಮಾರ್ಕೆಟಿಂಗ್ ಆಯ್ಕೆಗಳು

ಜಾಹೀರಾತು ನೀಡುವಿಕೆ ಮತ್ತು ಮಾರ್ಕೆಟಿಂಗ್ ಉದ್ದೇಶಗಳಿಗಾಗಿ ನಿಮ್ಮ ವೈಯಕ್ತಿಕ ಮಾಹಿತಿಯ ನಮ್ಮ ಬಳಕೆ ಮತ್ತು ಬಹಿರಂಗಪಡಿಸುವಿಕೆಗೆ ಸಂಬಂಧಿಸಿ ನಾವು ನಿಮಗೆ ಹಲವಾರು ಆಯ್ಕೆಗಳನ್ನು ನೀಡುತ್ತೇವೆ. ಕೆಳಗಿನ "***ನಮ್ಮನ್ನು ಸಂಪರ್ಕಿಸುವುದು ಹೇಗೆ***" ವಿಭಾಗದಲ್ಲಿ ನೀಡಿರುವ ವಿಧಾನಗಳಲ್ಲಿ ಒಂದನ್ನು ಬಳಸಿಕೊಂಡು ನೀವು ನಿಮ್ಮ ಸಂಪರ್ಕ ವಿವರಗಳನ್ನು

ಪ್ರವೇಶಿಸಬಹುದು ಅಥವಾ ಅಪ್‌ಡೇಟ್ ಮಾಡಬಹುದು ಮತ್ತು ನಿಮ್ಮ ಸಂವಹನ ಆದ್ಯತೆಗಳನ್ನು ಮಾರ್ಪಡಿಸಬಹುದು. ನಮ್ಮಿಂದ ನೀವು ಮಾರ್ಕೆಟಿಂಗ್ ಸಂವಹನಗಳನ್ನು ಸ್ವೀಕರಿಸದೆ ಇರಲು ಆಯ್ಕೆ ಮಾಡಿದರೆ, ಭದ್ರತಾ ಅಪ್‌ಡೇಟ್, ಬಿಲ್ಲಿಂಗ್ ಸಮಸ್ಯೆ ಅಥವಾ ಉತ್ಪನ್ನ ತಲುಪಿಸುವಿಕೆಯ ಕುರಿತ ಮಾಹಿತಿಯಂತಹಹ ನಿಮ್ಮ ಉತ್ಪನ್ನಗಳು ಅಥವಾ Intel® Services ಗೆ ಸಂಬಂಧಿಸಿದ ಸಂವಹನಗಳನ್ನು ನಾವು ಆನಂತರವೂ ನಿಮಗೆ ಕಳುಹಿಸಬಹುದು ಎನ್ನುವುದನ್ನು ಕೂಡ ದಯವಿಟ್ಟು ಗಮನಿಸಿ. Intel Services ಮೂಲಕ (ನಮ್ಮ ವೆಬ್‌ಸೈಟ್ ಸೇರಿದಂತೆ) ತಲುಪಿಸಲಾಗುವ ಕೆಲವು ಜಾಹೀರಾತು ಕಂಟೆಂಟ್ ಕುಕೀಗಳು ಮತ್ತು ಅದೇ ರೀತಿಯ ತಂತ್ರಜ್ಞಾನಗಳನ್ನು ಬಳಸುತ್ತದೆ. ನಮ್ಮ ಕುಕೀ ಸೂಚನೆ ಇಲ್ಲಿ ಲಭ್ಯವಿದ್ದು ಅಂತಹ ತಂತ್ರಜ್ಞಾನಗಳ Intel ಬಳಕೆ ಮತ್ತು ನೀವು ಅವುಗಳ ಬಳಕೆಯನ್ನು ಹೇಗೆ ನಿರ್ವಹಿಸಬಹುದು ಅಥವಾ ನಿರಾಕರಿಸಬಹುದು ಎನ್ನುವ ಕುರಿತು ಹೆಚ್ಚಿನ ಮಾಹಿತಿಯನ್ನು ಒಳಗೊಂಡಿದೆ.

## ಇತರ ಗೌಪ್ಯತೆ ಸಂಬಂಧಿತ ಮಾಹಿತಿ

ಈ ಸೂಚನೆ, ನಮ್ಮ ಡೇಟಾ ಉಳಿಸಿಕೊಳ್ಳುವಿಕೆ ಅಭ್ಯಾಸಗಳು, ಅಂತಾರಾಷ್ಟ್ರೀಯ ಅನುಸರಣೆ, ಅಪ್ರಾಪ್ತ ವಯಸ್ಕರ ವೈಯಕ್ತಿಕ ಮಾಹಿತಿಯೊಂದಿಗೆ ಕಾರ್ಯನಿರ್ವಹಿಸುವಿಕೆ ಮತ್ತು ಮಾಹಿತಿ ಭದ್ರತೆಗೆ ಬದಲಾವಣೆಗಳನ್ನು ನಾವು ಹೇಗೆ ಸಂವಹನ ಮಾಡುತ್ತೇವೆ ಎನ್ನುವಂತಹ ನಿಮಗೆ ಮುಖ್ಯವಾದುದು ಅನ್ನಿಸುವ ಹೆಚ್ಚುವರಿ ಮಾಹಿತಿಯನ್ನು ನೀವು ಕೆಳಗೆ ಕಂಡುಕೊಳ್ಳಬಹುದು.

### ಭದ್ರತೆ

ತಾತ್ಕಾಲಿಕ ಅಥವಾ ಶಾಶ್ವತ ನಷ್ಟ, ನಾಶಪಡಿಸುವಿಕೆ ಮತ್ತು ಅನಧಿಕೃತ ಅಥವಾ ಕಾನೂನುಬಾಹಿರ ಪ್ರವೇಶ, ತಿರುಚುವಿಕೆ, ಬಳಕೆ ಅಥವಾ ಬಹಿರಂಗಪಡಿಸುವಿಕೆಯಂತಹ ಅಪಾಯಗಳ ವಿರುದ್ಧ ನಿಮ್ಮ ವೈಯಕ್ತಿಕ ಮಾಹಿತಿಯನ್ನು ರಕ್ಷಿಸಲು ಸಮಂಜಸ ಮತ್ತು ಸೂಕ್ತ ಆಡಳಿತಾತ್ಮಕ, ತಾಂತ್ರಿಕ ಮತ್ತು ಸಾಂಸ್ಥಿಕ ಭದ್ರತಾ ಕ್ರಮಗಳನ್ನು ಒದಗಿಸಲು Intel® Services ಅನ್ನು ವಿನ್ಯಾಸಗೊಳಿಸಲಾಗಿದೆ. ನಾವು ನಮ್ಮ ಪೂರೈಕೆದಾರರು ಮತ್ತು ಮಾರಾಟಗಾರರೊಂದಿಗೆ ಹಂಚಿಕೊಳ್ಳುವ ವೈಯಕ್ತಿಕ ಮಾಹಿತಿಯನ್ನು ಅವರು ಪ್ರವೇಶಿಸಿದಾಗ ಅಥವಾ ಬಳಸಿದಾಗ ಅವರು ಅದೇ ರೀತಿಯ ರಕ್ಷಣೆಗಳನ್ನು ಅನ್ವಯಿಸುವುದನ್ನು ನಾವು ಅಗತ್ಯವಾಗಿಸುತ್ತೇವೆ. Intel® Services ಬಳಕೆದಾರರು ಕೂಡ ಅವರು ಬಳಸುತ್ತಿರುವಾಗ ಡೇಟಾ, ಸಿಸ್ಟಂಗಳು, ನೆಟ್‌ವರ್ಕ್‌ಗಳು ಸೇವೆಯನ್ನು ರಕ್ಷಿಸುವಲ್ಲಿ ಅವರ ಕರ್ತವ್ಯವನ್ನು ಮಾಡಬೇಕು. ಯಾವುದೇ ತಂತ್ರಜ್ಞಾನ, ಡೇಟಾ ಪ್ರಸರಣ ಅಥವಾ ಸಿಸ್ಟಂ ಅನ್ನು 100% ಸುರಕ್ಷಿತ ಎಂದು ಖಾತರಿಪಡಿಸಲಾಗದು. ನಮ್ಮೊಂದಿಗಿನ ನಿಮ್ಮ ಸಂವಹನ ಈಗ ಸುರಕ್ಷಿತವಾಗಿಲ್ಲ ಎಂದು ನಂಬಲು ನಿಮ್ಮಲ್ಲಿ ಕಾರಣಗಳಿದ್ದರೆ (ಉದಾಹರಣೆಗೆ, ಯಾವುದೇ Intel ಖಾತೆಯ ನಿಮ್ಮ ಪಾಸ್‌ವರ್ಡ್ ಅನ್ನು ಬೇರೆಯವರು ಕದ್ದಿದ್ದಾರೆ ಎಂದು ನಿಮಗೆ ಅನಿಸಿದರೆ), ದಯವಿಟ್ಟು ಕೆಳಗಿನ "***ನಮ್ಮನ್ನು ಸಂಪರ್ಕಿಸುವುದು ಹೇಗೆ***" ವಿಭಾಗದಲ್ಲಿನ ಸೂಚನೆಗಳನ್ನು ಬಳಸಿಕೊಂಡು ನಮ್ಮನ್ನು ಸಂಪರ್ಕಿಸುವ ಮೂಲಕ ತಕ್ಷಣವೇ ನಮಗೆ ಸೂಚನೆ ನೀಡಿ.

### ಅಪ್ರಾಪ್ತ ವಯಸ್ಕರ ವೈಯಕ್ತಿಕ ಮಾಹಿತಿ

ಯುನೈಟೆಡ್ ಸ್ಟೇಟ್ಸ್‌ನಲ್ಲಿ ನಾವು ಮಕ್ಕಳ ಆನ್‌ಲೈನ್ ಗೌಪ್ಯತೆ ರಕ್ಷಣೆ ಕಾಯ್ದೆಯ ಅನುಸರಣೆ ಮಾಡುತ್ತೇವೆ ಮತ್ತು Intel Services ಗೆ ಅನ್ವಯಿಸುವಲ್ಲಿ, ಜಗತ್ತಿನಾದ್ಯಂತ ಅದೇ ರೀತಿಯ ಕಾನೂನುಗಳೊಂದಿಗೆ ಅನುಸರಣೆ ಮಾಡುತ್ತೇವೆ. ಪೋಷಷಕರ ಅಥವಾ ಕಾನೂನುಬದ್ಧ ಪಾಲಕರಿಂದ ಸೂಕ್ತ ಸಮ್ಮತಿಯಿಲ್ಲದೆ ತಿಳಿದಿದ್ದೂ ನಾವು ಅಪ್ರಾಪ್ತರಿಂದ ವೈಯಕ್ತಿಕ

ಮಾಹಿತಿಯನ್ನು ಸಂಗ್ರಹಿಸುವುದಿಲ್ಲ. ಅವಶ್ಯಕ ಸಮ್ಮತಿ ಪಡೆಯದೆ ಅಪ್ರಾಪ್ತ ವಯಸ್ಕರಿಂದ ನಾವು ವೈಯಕ್ತಿಕ ಮಾಹಿತಿಯನ್ನು ಸಂಗ್ರಹಿಸಿರಬಹುದು ಎಂದು ನೀವು ಭಾವಿಸಿದರೆ, ದಯವಿಟ್ಟು ಕೆಳಗಿನ *"ನಮ್ಮನ್ನು ಸಂಪರ್ಕಿಸುವುದು ಹೇಗೆ"* ವಿಭಾಗದಲ್ಲಿ ವಿವರಿಸಿರುವ ವಿಧಾನಗಳನ್ನು ಬಳಸಿಕೊಂಡು ನಮಗೆ ತಿಳಿಸಿ ಮತ್ತು ನಾವು ತನಿಖೆ ಮಾಡುತ್ತೇವೆ ಹಾಗೂ ತಕ್ಷಣವೇ ಸಮಸ್ಯೆಯನ್ನು ಬಗೆಹರಿಸುತ್ತೇವೆ. ಈ ಉದ್ದೇಶಗಳಿಗಾಗಿ, "ಅಪ್ರಾಪ್ತ ವಯಸ್ಕ" ಎನ್ನುವುದನ್ನು ನಾವು ಅವರು ನೆಲೆಸಿರುವ ಪ್ರದೇಶದಲ್ಲಿ ಪ್ರಾಪ್ತ ವಯಸ್ಸಿಗಿಂತ ಕಡಿಮೆ ವಯಸ್ಸಿನ ವ್ಯಕ್ತಿಗಳು ಎಂದು ವ್ಯಾಖ್ಯಾನಿಸುತ್ತೇವೆ.

ಅಪ್ರಾಪ್ತ ವಯಸ್ಕರು ಅಥವಾ ಅವರ ಕಾನೂನುಬದ್ಧ ಪಾಲಕರು, ಈ ಸೂಚನೆಯ *"ನಮ್ಮನ್ನು ಸಂಪರ್ಕಿಸುವುದು ಹೇಗೆ"* ವಿಭಾಗದಲ್ಲಿನ ಮಾಹಿತಿ ಬಳಸಿಕೊಂಡು ನಮ್ಮನ್ನು ಸಂಪರ್ಕಿಸುವ ಮೂಲಕ ಈ ಹಿಂದೆ ಮಾಡಿದ ಸಮ್ಮತಿ ಆಯ್ಕೆಗಳನ್ನು ಬದಲಾಯಿಸಬಹುದು ಅಥವಾ ಹಿಂಪಡೆಯಬಹುದು ಅಥವಾ ಅವರು ಒದಗಿಸಿದ ಅಥವಾ Intel ಸೈಟ್‌ಗಳಿಗೆ ಪೋಸ್ಟ್ ಮಾಡಿದ ಯಾವುದೇ ವೈಯಕ್ತಿಕ ಮಾಹಿತಿಗೆ ಪ್ರವೇಶ ಅಥವಾ ತೆಗೆದುಹಾಕುವಂತೆ ವಿನಂತಿಸಬಹುದು. ಅಂತಹ ವಿನಂತಿ ಮಾಡಿದ ಮೂವತ್ತು ದಿನಗಳ ಒಳಗೆ (ಕಾನೂನಿನಿಂದ ಇನ್ನೊಂದು ಅವಧಿ ಒದಗಿಸದ ಹೊರತು) ಅಂತಹ ಕಂಟೆಂಟ್ ಅಥವಾ ಮಾಹಿತಿಯನ್ನು ಉಳಿಸಿಕೊಳ್ಳುವ ಕಾನೂನಾತ್ಮಕ ಅಗತ್ಯವಿಲ್ಲದ ಹೊರತು ಅಂತಹ ಕಂಟೆಂಟ್ ಅನ್ನು Intel ಅನಾಮಧೇಯಗೊಳಿಸುತ್ತದೆ ಅಥವಾ ಸಾರ್ವಜನಿಕ ನೋಟದಿಂದ ತೆಗೆದುಹಾಕುತ್ತದೆ.

### ಅಂತಾರಾಷ್ಟ್ರೀಯ ಅನುಸರಣೆ

Intel ಯುನೈಟೆಡ್ ಸ್ಟೇಟ್ಸ್‌ನಲ್ಲಿ ತನ್ನ ಪ್ರಧಾನ ಕಚೇರಿ ಹೊಂದಿರುವ ಜಾಗತಿಕ ಕಂಪನಿಯಾಗಿದೆ. ಹಾಗಾಗಿ, ನಾವು ಯುನೈಟೆಡ್ ಸ್ಟೇಟ್ಸ್ ಮತ್ತು ಇತರ ದೇಶಗಳು/ಪ್ರದೇಶಗಳಲ್ಲಿರುವ ನಮ್ಮ ಅಂಗಸಂಸ್ಥೆಗಳು ಮತ್ತು ಅಧೀನ ಸಂಸ್ಥೆಗಳ ನಡುವೆ ನಿಮ್ಮ ವೈಯಕ್ತಿಕ ಮಾಹಿತಿಯನ್ನು ವರ್ಗಾಯಿಸಬಹುದು. ನಿಮಗಿಂತ ಬೇರೆ ದೇಶ/ಪ್ರದೇಶದಲ್ಲಿ ಇರಬಹುದಾದ ನಮ್ಮ ತೃತೀಯ ಪಕ್ಷದ ಸೇವಾ ಪೂರೈಕೆದಾರರಿಗೆ ಕೂಡ ನಾವು ನಿಮ್ಮ ವೈಯಕ್ತಿಕ ಮಾಹಿತಿಯನ್ನು ವರ್ಗಾಯಿಸಬಹುದು. ಈ ಕೆಳಗಿನ ದೇಶಗಳು/ಪ್ರದೇಶಗಳಲ್ಲಿ ಪ್ರಕ್ರಿಯೆಗೊಳಿಸುವುದಕ್ಕಾಗಿ ನಮ್ಮ ಪ್ರಮುಖ ಡೇಟಾ ಕೇಂದ್ರಗಳಿಗೆ ಕೂಡ ನಾವು ನಿಮ್ಮ ವೈಯಕ್ತಿಕ ಮಾಹಿತಿಯನ್ನು ವರ್ಗಾಯಿಸಬಹುದು: ಅರ್ಜೆಂಟೀನಾ, ಆಸ್ಟ್ರಿಯಾ, ಬ್ರೆಜಿಲ್, ಕೆನಡಾ, ಚೀನಾ, ಕೋಸ್ಟ ರಿಕಾ, ಡೆನ್ಮಾರ್ಕ್, ಈಜಿಪ್ಟ್, ಫಿನ್‌ಲ್ಯಾಂಡ್, ಫ್ರಾನ್ಸ್, ಜರ್ಮನಿ, ಹಾಂಗ್ ಕಾಂಗ್, ಭಾರತ, ಐರ್‌ಲ್ಯಾಂಡ್, ಇಸ್ರೇಲ್, ಇಟಲಿ, ಜಪಾನ್, ಮಲೇಷ್ಯಾ, ಮೆಕ್ಸಿಕೊ, ನೆದರ್‌ಲ್ಯಾಂಡ್ಸ್, ಫಿಲಿಫೈನ್ಸ್, ಪೋಲ್ಯಾಂಡ್, ರೊಮೇನಿಯಾ, ರಷ್ಯನ್ ಫೆಡರೇಷನ್, ಸಿಂಗಾಪುರ, ದಕ್ಷಿಣ ಕೊರಿಯಾ, ಸ್ವೀಡನ್, ಸ್ವಿಜರ್‌ಲ್ಯಾಂಡ್, ತೈವಾನ್, ಟರ್ಕಿ, ಯುನೈಟೆಡ್ ಕಿಂಗ್‌ಡಮ್, ಯುನೈಟೆಡ್ ಸ್ಟೇಟ್ಸ್, ಯುನೈಟೆಡ್ ಅರಬ್ ಎಮಿರೇಟ್ಸ್ ಮತ್ತು ವಿಯೆಟ್ನಾಂ.

ಈ ದೇಶಗಳು/ಪ್ರದೇಶಗಳು ಕಾಲಕಾಲಕ್ಕೆ ಬದಲಾಗಬಹುದು ಮತ್ತು ಲಿಖಿತ ವಿನಂತಿಯ ಮೇರೆಗೆ Intel ಪ್ರಸ್ತುತ ಪಟ್ಟಿಯನ್ನು ಒದಗಿಸಬಹುದು. ದಕ್ಷವಾಗಿ ಕಾರ್ಯಾಚರಣೆ ಮಾಡಲು, ಕಾರ್ಯಕ್ಷಮತೆಯನ್ನು ಸುಧಾರಿಸಲು ಮತ್ತು ಒಂದು ಔಟೇಜ್ ಅಥವಾ ಇತರ ಸಮಸ್ಯೆಯ ಸಂದರ್ಭದಲ್ಲಿ ಮಾಹಿತಿಯನ್ನು ರಕ್ಷಿಸುವ ಸಲುವಾಗಿ ರಿಡಂಡನ್ಸಿಗಳನ್ನು ರಚಿಸಲು ನಾವು ಮಾಹಿತಿಯನ್ನು ವರ್ಗಾಯಿಸುತ್ತೇವೆ. ಈ ಸೂಚನೆಯ ಬಾಧ್ಯತೆಗಳನ್ನು ಪೂರೈಸುವ ಮತ್ತು ನಾವು ವರ್ಗಾವಣೆ ಮಾಡುವ ಯಾವುದೇ ಸ್ಥಳದಲ್ಲಿನ ಕಾನೂನಿನೊಂದಿಗೆ ಅನುಸರಣೆ ಹೊಂದಿರುವ ರೀತಿಯಲ್ಲಿ ನಿಮ್ಮ ವೈಯಕ್ತಿಕ ಮಾಹಿತಿಯನ್ನು ನಾವು ಪ್ರಕ್ರಿಯೆಗೊಳಿಸುತ್ತೇವೆ.

ಮೂಲ ದೇಶ/ಪ್ರದೇಶದಾಚೆಗೆ Intel ವೈಯಕ್ತಿಕ ಮಾಹಿತಿಯನ್ನು ವರ್ಗಾವಣೆ ಮಾಡಿದಾಗಲೆಲ್ಲ, ಅನ್ವಯಿಸುವ ಕಾನೂನುಗಳ ಅನುಸರಣೆಯಲ್ಲಿ ನಾವು ಅದನ್ನು ಮಾಡುತ್ತೇವೆ. ಯುರೋಪಿಯನ್ ಆರ್ಥಿಕ ಪ್ರದೇಶದಲ್ಲಿ (EEA) ಸೃಷ್ಟಿಯಾಗುವ ವೈಯಕ್ತಿಕ ಮಾಹಿತಿಯನ್ನು, ಯುರೋಪಿಯನ್ ಆಯೋಗ ನಿರ್ಧರಿಸಿದಂತೆ "ಪರ್ಯಾಪ್ತ ಮಟ್ಟದ ರಕ್ಷಣೆ" ಹೊಂದಿಲ್ಲದಿರುವ EEA ಹೊರಗಿನ Intel ಸಂಸ್ಥೆಗೆ ವರ್ಗಾಯಿಸುವಾಗ, ಅದರ EEA ಬಾಧ್ಯತೆಯ ಕಾರ್ಪೊರೇಟ್ ನಿಯಮಗಳ ("EEA BCRs") ಆಧಾರದಲ್ಲಿ ಅದನ್ನು ಮಾಡಲಾಗುತ್ತದೆ. Intel EEA BCRs ವೈಯಕ್ತಿಕ ಮಾಹಿತಿಯ ಪರ್ಯಾಪ್ತ ರಕ್ಷಣೆಯನ್ನು ಸ್ಥಾಪಿಸುತ್ತವೆ ಮತ್ತು EEA BCRs ಗೆ ಅನುಸೂಚಿ 1 ರಲ್ಲಿ ಗುರುತಿಸಿರುವ ಅಧೀನ ಸಂಸ್ಥೆಗಲು ಮತ್ತು ಅಂಗಸಂಸ್ಥೆಗಳ ಮೇಲೆ ಕಾನೂನಾತ್ಮಕ ಬಾಧ್ಯತೆ ಹೊಂದಿವೆ. Intel EEA BCRs ಅನ್ನು ಇಲ್ಲಿ ಪ್ರವೇಶಿಸಬಹುದು. Intel EEA BCRs ಅನ್ವಯಿಸದಿರುವಲ್ಲಿ, ನಾವು EU ಪ್ರಮಾಣಿತ ಕರಾರಿನ ಕಲಂಗಳನ್ನು ಒಳಗೊಂಡಿರುವ ಕರಾರುಗಳಂತಹ ಕಾನೂನುಬದ್ಧ ಕ್ರಮಗಳ ಮೇಲೆ ನಾವು ಅವಲಂಬಿತರಾಗುತ್ತೇವೆ.

ಅದೇ ರೀತಿ, ಯುನೈಟೆಡ್ ಕಿಂಗ್‌ಡಮ್‌ನಲ್ಲಿ (UK) ಸೃಷ್ಟಿಯಾಗುವ ಮತ್ತು ಸಮರ್ಥ UK ಅಧಿಕಾರಿಗಳಿಂದ ನಿರ್ಧರಿಸಿದಂತೆ "ಪರ್ಯಾಪ್ತ ಮಟ್ಟದ ರಕ್ಷಣೆ" ಹೊಂದಿಲ್ಲದ UK ಹೊರಗಿನ Intel ಸಂಸ್ಥೆಗೆ ವರ್ಗಾಯಿಸಿದ ವೈಯಕ್ತಿಕ ಮಾಹಿತಿಗಾಗಿ, Intel ಬಾಧ್ಯತೆಯ ಕಾರ್ಪೊರೇಟ್ ನಿಯಮಗಳು ("UK BCRs") ಎಂದು ಕರೆಯಲಾಗುವ UK ಬಾಧ್ಯತೆಯ ಕಾರ್ಪೊರೇಟ್ ನಿಯಮಗಳ ಆಧಾರದಲ್ಲಿ ಅದನ್ನು ಮಾಡಲಾಗುತ್ತದೆ. Intel UK BCRs ವೈಯಕ್ತಿಕ ಮಾಹಿತಿಯ ಪರ್ಯಾಪ್ತ ರಕ್ಷಣೆಯನ್ನು ಸ್ಥಾಪಿಸುತ್ತದೆ ಮತ್ತು UK BCRs ನ ಅನುಸೂಚಿ 1 ರಲ್ಲಿ ಗುರುತಿಸಿರುವ ಅಧೀನ ಸಂಸ್ಥೆಗಳು ಮತ್ತು ಅಂಗಸಂಸ್ಥೆಗಳ ಮೇಲೆ ಕಾನೂನು ಬಾಧ್ಯತೆ ಹೊಂದಿರುತ್ತದೆ. Intel UK BCRs ಅನ್ನು ಇಲ್ಲಿ ಪ್ರವೇಶಿಸಬಹುದು. Intel UK BCRs ಅನ್ವಯಿಸದಿರುವಲ್ಲಿ, ನಾವು ವರ್ಗಾಯಿಸುವ ವೈಯಕ್ತಿಕ ಮಾಹಿತಿಗೆ ಪರ್ಯಾಪ್ತ ರಕ್ಷಣೆಯನ್ನು ಒದಗಿಸಲು ಪ್ರಮಾಣಿತ ಕರಾರಿನ ಕಲಂಗಳಂತಹ ಇತರ ಕಾನೂನುಬದ್ಧ ಕ್ರಮಗಳ ಮೇಲೆ ನಾವು ಅವಲಂಬಿತರಾಗುತ್ತೇವೆ.

### ಉಳಿಸಿಕೊಳ್ಳುವಿಕೆ

ಇವುಗಳಿಗೆ ಅವಶ್ಯಕವಿರುವ ಅವಧಿಗೆ ನಾವು ವೈಯಕ್ತಿಕ ಮಾಹಿತಿಯನ್ನು ಉಳಿಸಿಕೊಳ್ಳುತ್ತೇವೆ: ವೈಯಕ್ತಿಕ ಸಮ್ಮತಿಯಲ್ಲಿ ಒಪ್ಪಿರುವಂತೆ ಕಾನೂನು ಬಾಧ್ಯತೆಗಳ ಅನುಸರಣೆ ಮಾಡಲು ಅಗತ್ಯವಿರುವಂತೆ ವಿನಂತಿಸಿದ Intel® Services ಒದಗಿಸಲು (ಉದಾ. ಜಾಹೀರಾತು ನೀಡುವಿಕೆ ಮತ್ತು ಮಾರ್ಕೆಟಿಂಗ್ ಆಯ್ಕೆಗಳಿಗೆ ಹೊರಗುಳಿಯುವಿಕೆ ಪಟ್ಟಿಗಳನ್ನು ನಿರ್ವಹಿಸಲು ಅಥವಾ ಕಡ್ಡಾಯ ರೆಕಾರ್ಡ್ ಉಳಿಸಿಕೊಳ್ಳುವಿಕೆ ಅಥವಾ ಕಾನೂನುಬದ್ಧ ಇರಿಸಿಕೊಳ್ಳುವಿಕೆ ಅಗತ್ಯಗಳನ್ನು ಅನುಸರಣೆ ಮಾಡಲು), ವಿವಾದಗಳನ್ನು ಬಗೆಹರಿಸಲು ಮತ್ತು ಈ ಗೌಪ್ಯತೆ ಸೂಚನೆಯಲ್ಲಿ ವಿವರಿಸಿರುವ ಇತರ ಉದ್ದೇಶಗಳು, ಹಕ್ಕುಗಳು ಮತ್ತು ಬಾಧ್ಯತೆಗಳನ್ನು ಪೂರೈಸಲು. ಮಾಹಿತಿಯ ವಿಧ ಮತ್ತು ಅದನ್ನು ಹೇಗೆ ಬಳಸಲಾಗುತ್ತದೆ ಎನ್ನುವುದನ್ನು ಆಧರಿಸಿ ಉಳಿಸಿಕೊಳ್ಳುವಿಕೆ ಅವಧಿಗಳು ಗಮನಾರ್ಹವಾಗಿ ವ್ಯತ್ಯಾಸವಾಗಬಹುದು ಮತ್ತು ನಮ್ಮ ಉಳಿಸಿಕೊಳ್ಳುವಿಕೆ ಅವಧಿಗಳು ಕಾನೂನಿನಿಂದ ಕಡ್ಡಾಯಗೊಳಿಸಿದ ಉಳಿಸಿಕೊಳ್ಳುವಿಕೆ ಅವಧಿಗಳು, ಬಾಕಿ ಇರುವ ಅಥವಾ ಸಂಭಾವ್ಯ ವ್ಯಾಜ್ಯ, ನಮ್ಮ ಬೌದ್ಧಿಕ ಸ್ವತ್ತು ಅಥವಾ ಮಾಲೀಕತ್ವ ಹಕ್ಕುಗಳು, ಕರಾರಿನ ಅಗತ್ಯಗಳು, ಕಾರ್ಯಾಚರಣೆಯ ನಿರ್ದೇಶನಗಳು ಅಥವಾ ಅಗತ್ಯಗಳು ಮತ್ತು ಐತಿಹಾಸಿಕ ಆರ್ಕೈವಿಂಗ್ ಅನ್ನು ಒಳಗೊಂಡ ಮಾನದಂಡವನ್ನು ಆಧರಿಸಿವೆ. ನಮ್ಮ ಸಿಸ್ಟಂಗಳಿಂದ ವೈಯಕ್ತಿಕ ಮಾಹಿತಿಯನ್ನು ತೆಗೆದುಹಾಕಿದಾಗ, ಪರ್ಯಾಪ್ತ ಭದ್ರತಾ ಪ್ರೊಟೋಕಾಲ್‌ಗಳನ್ನು ಬಳಸಿಕೊಂಡು ಅದನ್ನು ಅಳಿಸಲಾಗುತ್ತದೆ ಅಥವಾ ನಾಶಪಡಿಸಲಾಗುತ್ತದೆ ಹಾಗಾಗಿ ಅದನ್ನು ಮರುರಚಿಸಲಾಗದು ಅಥವಾ ಓದಲಾಗದು.

## ತೃತೀಯ ಪಕ್ಷದ ಸೈಟ್‌ಗಳು ಮತ್ತು ಸೇವೆಗಳು

ಗೌಪ್ಯತೆ ಮತ್ತು ಭದ್ರತೆ, ಡೇಟಾ ಸಂಗ್ರಹಣೆ, ಪ್ರಕ್ರಿಯೆಗೊಳಿಸುವಿಕೆ, ಬಳಕೆ, ಶೇಖರಣೆ ಮತ್ತು ಬಹಿರಂಗಪಡಿಸುವಿಕೆಗೆ ಸಂಬಂಧಿಸಿದ ನೀತಿಗಳು ಮತ್ತು ಅಭ್ಯಾಸಗಳು ಸೇರಿದಂತೆ, Intel ಪರವಾಗಿ ಕಾರ್ಯಾಚರಣೆ ನಡೆಸುತ್ತಿಲ್ಲದ ತೃತೀಯ ಪಕ್ಷಗಳು ಅಥವಾ ಇತರ ಸಂಸ್ಥೆಗಳ ನೀತಿಗಳು ಮತ್ತು ಅಭ್ಯಾಸಗಳಿಗೆ ನಾವು ಜವಾಬ್ದಾರರಲ್ಲ. ಇದು ಇವುಗಳನ್ನು ಒಳಗೊಂಡಿದೆ: (ಎ) ಯಾವುದೇ ತೃತೀಯ ಪಕ್ಷ ಕಾರ್ಯಾಚರಣೆ ಮಾಡುತ್ತಿರುವ Intel® Services ಲಿಂಕ್ ಹೊಂದಿರುವ ಯಾವುದೇ ಸೈಟ್ ಅಥವಾ ಸೇವೆ – Intel® Services ನಲ್ಲಿ ಒಂದು ಲಿಂಕ್‌ನ ಸೇರ್ಪಡೆಯು ನಮ್ಮಿಂದ ಅಥವಾ ನಮ್ಮ ಅಂಗಸಂಸ್ಥೆಗಳಿಂದ ಲಿಂಕ್ ಮಾಡಿದ ಸೈಟ್ ಅಥವಾ ಸೇವೆಯ ಪ್ರಚಾರವನ್ನು ಸೂಚಿಸುವುದಿಲ್ಲ; ಅಥವಾ (ಬಿ) Intel® Services ಅಥವಾ ನಮ್ಮ ಕಾರ್ಪೊರೇಟ್ ಸಾಮಾಜಿಕ ಮಾಧ್ಯಮ ಪುಟಗಳ ಮೂಲಕ ಅಥವಾ ಅವುಗಳಿಗೆ ಸಂಬಂಧಿಸಿ ಇತರ ಸಂಘಟನೆಗಳಿಗೆ ನೀವು ಬಹಿರಂಗಪಡಿಸುವ ಯಾವುದೇ ವೈಯಕ್ತಿಕ ಮಾಹಿತಿ ಸೇರಿದಂತೆ - ಯಾವುದೇ ಆ್ಯಪ್ ಡೆವಲಪರ್, ಆ್ಯಪ್ ಪೂರೈಕೆದಾರ, ಸಾಮಾಜಿಕ ಮಾಧ್ಯಮ ವೇದಿಕೆ ಪೂರೈಕೆದಾರ, ಆಪರೇಟಿಂಗ್ ಸಿಸ್ಟಂ ಪೂರೈಕೆದಾರ, ವೈರ್‌ಲೆಸ್ ಸೇವೆ ಪೂರೈಕೆದಾರ ಅಥವಾ ಸಾಧನ ಉತ್ಪಾದಕ (Facebook, Apple, Google, Microsoft, LinkedIn ಮುಂತಾದವು).

## ಈ ನೀತಿಗೆ ಬದಲಾವಣೆಗಳು

ಈ ಗೌಪ್ಯತೆ ಸೂಚನೆಯನ್ನು ನಾವು ಕಾಲಕಾಲಕ್ಕೆ ಬದಲಾಯಿಸಬಹುದು, ಇದರಿಂದಾಗಿ ಅದು ನಮ್ಮ ಅಭ್ಯಾಸಗಳು, Intel® Services ಮತ್ತು ಕಾನೂನು ಅಗತ್ಯಗಳನ್ನು ನಿಖರವಾಗಿ ಪ್ರತಿಬಿಂಬಿಸುತ್ತದೆ. ಈ ಸೂಚನೆಯ ಮೇಲ್ಭಾಗದಲ್ಲಿ "*ಕೊನೆಯದಾಗಿ ಪರಿಷ್ಕರಿಸಿದ್ದು*" ವಿಭಾಗವು ಈ ಗೌಪ್ಯತೆ ಸೂಚನೆಯನ್ನು ಕೊನೆಯದಾಗಿ ಯಾವಾಗ ಪರಿಷ್ಕರಿಸಲಾಗಿದೆ ಎನ್ನುವುದನ್ನು ತಿಳಿಸುತ್ತದೆ ಮತ್ತು ಈ ದಿನಾಂಕವನ್ನು ನಾವು ಪ್ರತಿ ಬಾರಿ ಪರಿಷ್ಕರಣೆಯನ್ನು ಪೋಸ್ಟ್ ಮಾಡಿದಾಗ ಅಪ್‌ಡೇಟ್ ಮಾಡುತ್ತೇವೆ. ಈ ಗೌಪ್ಯತೆ ಸೂಚನೆಗೆ ಯಾವುದೇ ಬದಲಾವಣೆಗಳು ನಾವು Intel® Services ನಲ್ಲಿ ಪರಿಷ್ಕೃತ ಗೌಪ್ಯತೆ ಸೂಚನೆಯನ್ನು ಪ್ರಕಟಿಸಿದಾಗ ಜಾರಿಗೆ ಬರುತ್ತವೆ. ನಮ್ಮ ಗೌಪ್ಯತೆ ಅಭ್ಯಾಸಗಳ ಕುರಿತು ಮಾಹಿತಿಯುಕ್ತರಾಗಿರಲು ನೀವು ಆಗಾಗ ಪರಿಶೀಲಿಸಬೇಕು.

ನಮ್ಮ ಗೌಪ್ಯತೆ ಸೂಚನೆಗೆ ಯಾವುದೇ ಬದಲಾವಣೆಯು ನಿಮ್ಮ ವೈಯಕ್ತಿಕ ಮಾಹಿತಿಯ ಬಳಕೆಯ ಮೇಲೆ ಭೌತಿಕವಾಗಿ ಪರಿಣಾಮ ಬೀರಿದರೆ, ಇಮೇಲ್ ಕಳುಹಿಸುವ ಮೂಲಕ ಅಥವಾ ನಮ್ಮ ವೆಬ್‌ಸೈಟ್‌ನಲ್ಲಿ ಬದಲಾವಣೆಗಳ ಗಮನಾರ್ಹ ಸೂಚನೆಯನ್ನು ಪ್ರಕಟಿಸುವ ಮೂಲಕ ಸೇರಿದಂತೆ, ಮುಂಚಿತವಾಗಿ ನಿಮಗೆ ಸೂಚನೆ ನೀಡಲು ನಾವು ಸಮಂಜಸ ಪ್ರಯತ್ನಗಳನ್ನು ಬಳಸುತ್ತೇವೆ ಮತ್ತು ಯಾವುದೇ ಬದಲಾವಣೆಗೆ ಆಕ್ಷೇಪಿಸಲು ನಿಮಗೆ ಸಾಕಷ್ಟು ಸಮಯವನ್ನು ನೀಡುತ್ತೇವೆ. ಕೆಲವು ಪ್ರಕರಣಗಳಲ್ಲಿ, ಬದಲಾವಣೆಗಳಿಗೆ ಆಕ್ಷೇಪಿಸುವುದರಿಂದ ನಿಮಗೆ ಲಭ್ಯವಿರುವ Intel® Services ಲಭ್ಯತೆ ಅಥವಾ ಕಾರ್ಯಶೀಲತೆಯ ಮೇಲೆ ಪರಿಣಾಮವಾಗಬಹುದು. ಯಾವುದೇ ಅಪ್‌ಡೇಟ್ ಮಾಡಿದ ಗೌಪ್ಯತೆ ಸೂಚನೆಯ ಜಾರಿಗೊಳಿಸುವಿಕೆ ದಿನಾಂಕದ ಬಳಿಕ Intel® Services ನ ನಿಮ್ಮ ಮುಂದುವರಿದ ಬಳಕೆಯನ್ನು, ನಾವು ಮಾಡಿದ ಬದಲಾವಣೆಗಳಿಗೆ ನಿಮ್ಮ ಸ್ವೀಕೃತಿ ಎಂದು ನಾವು ಪರಿಗಣಿಸುತ್ತೇವೆ. ಅದಾಗ್ಯೂ, ಅನ್ವಯಿಸುವ ಡೇಟಾ ರಕ್ಷಣೆ ಕಾನೂನುಗಳಿಂದ ಇದು ಅಗತ್ಯವಿದ್ದರೆ ಮತ್ತು ಅಗತ್ಯವಿರುವಲ್ಲಿ ಪರಿಷ್ಕರಿಸಿದ ಗೌಪ್ಯತೆ ಸೂಚನೆಯಲ್ಲಿ ವಿವರಿಸಿದಂತೆ ನಿಮ್ಮ ವೈಯಕ್ತಿಕ ಮಾಹಿತಿಯ ನಮ್ಮ ಬಳಕೆಯಲ್ಲಿ ಯಾವುದೇ ಭೌತಿಕ ಬದಲಾವಣೆಗಳಿಗೆ ನಿಮ್ಮ ದೃಢವಾದ ಸಮ್ಮತಿಯನ್ನು ನಾವು ಕೋರುತ್ತೇವೆ.

ವೈಯಕ್ತಿಕ ಮಾಹಿತಿಯನ್ನು ನಾವು ಹೇಗೆ ಸಂಗ್ರಹಿಸುತ್ತೇವೆ, ಬಳಸುತ್ತೇವೆ ಮತ್ತು ಹಂಚಿಕೊಳ್ಳುತ್ತೇವೆ ಎನ್ನುವ ಕುರಿತು ಮಾಹಿತಿಯುಕ್ತರಾಗಿ ಇರಲು ಈ ಗೌಪ್ಯತೆ ಸೂಚನೆಯನ್ನು ನಿಯತಕಾಲಿಕವಾಗಿ ಪರಿಶೀಲಿಸುವಂತೆ ನಾವು ನಿಮ್ಮನ್ನು ಪ್ರೋತ್ಸಾಹಿಸುತ್ತೇವೆ.

## ನಮ್ಮನ್ನು ಸಂಪರ್ಕಿಸುವುದು ಹೇಗೆ

Intel ಗೌಪ್ಯತೆ ಅಭ್ಯಾಸಗಳ ಕುರಿತು ನೀವು ಯಾವುದೇ ಪ್ರಶ್ನೆಗಳು ಅಥವಾ ಕಳವಳಗಳನ್ನು ಹೊಂದಿದ್ದರೆ ಅಥವಾ ಈ ಸೂಚನೆಯಲ್ಲಿ ವಿವರಿಸಿದಂತೆ ನಿಮ್ಮ ಹಕ್ಕುಗಳು ಮತ್ತು ಆಯ್ಕೆಗಳನ್ನು ಚಲಾಯಿಸಲು, ನೀವು ಕೆಳಗಿನ ಸೂಕ್ತ ಲಿಂಕ್ ಅನ್ನು ಆಯ್ಕೆ ಮಾಡಬಹುದು:

- ನಿಮ್ಮ ಆಯ್ಕೆಗಳು ಮತ್ತು ಹಕ್ಕುಗಳು ಅಡಿಯಲ್ಲಿ ಈ ಸೂಚನೆಯಲ್ಲಿ ವಿವರಿಸಿರುವಂತೆ ನಿಮ್ಮ ವೈಯಕ್ತಿಕ ಮಾಹಿತಿಯ ಪ್ರವೇಶಿಸುವಿಕೆ, ಅಳಿಸುವಿಕೆ ಅಥವಾ ಬದಲಾಯಿಸುವಿಕೆಯಂತಹ ನಿಮ್ಮ ಗೌಪ್ಯತೆ ಹಕ್ಕುಗಳನ್ನು ಚಲಾಯಿಸಲು, ದಯವಿಟ್ಟು ನಿಮ್ಮ ಗೌಪ್ಯತೆ ಹಕ್ಕುಗಳನ್ನು ಇಲ್ಲಿ ಚಲಾಯಿಸಿ.
- ನಿಮ್ಮ ಸಂಪರ್ಕ ವಿವರಗಳನ್ನು ಪ್ರವೇಶಿಸಲು ಅಥವಾ ಅಪ್‌ಡೇಟ್ ಮಾಡಲು ಅಥವಾ ಜಾಹೀರಾತು ನೀಡುವಿಕೆ ಮತ್ತು ಮಾರ್ಕೆಟಿಂಗ್ ಆಯ್ಕೆಗಳು ಅಡಿಯಲ್ಲಿ ಈ ಸೂಚನೆಯಲ್ಲಿ ವಿವರಿಸಿರುವಂತೆ ನಿಮ್ಮ ಸಂವಹನ ಆದ್ಯತೆಗಳನ್ನು ಮಾರ್ಪಡಿಸಲು, ನೀವು ಇವುಗಳಲ್ಲಿ ಒಂದನ್ನು ಮಾಡಬಹುದು:
  - ನಿರ್ದಿಷ್ಟ ಉತ್ಪನ್ನ ಅಥವಾ ಸೇವೆಯ ವೆಬ್‌ಸೈಟ್‌ಗೆ ಭೇಟಿ ನೀಡಿ
  - My Intel ಪೋರ್ಟಲ್ ಬಳಸಿ
  - ಸ್ವೀಕರಿಸಿದ ಯಾವುದೇ ಮಾರ್ಕೆಟಿಂಗ್ ಸಂವಹನದ ಕೆಳಗಿರುವ 'ಅನ್‌ಸಬ್‌ಸ್ಕ್ರೈಬ್' ಲಿಂಕ್ ಬಳಸಿ
  - Intel ಸಬ್‌ಸ್ಕ್ರಿಪ್ಶನ್ ಸೆಂಟರ್ ಬಳಸಿ
- ಒಂದು ಪ್ರಶ್ನೆಯನ್ನು ಕೇಳಲು ದಯವಿಟ್ಟು ಅದನ್ನು ಇಲ್ಲಿ ಸಲ್ಲಿಸಿ.
- ಒಂದು ಗೌಪ್ಯತೆ ದೂರನ್ನು ಸಲ್ಲಿಸಲು, ದಯವಿಟ್ಟು ಅದನ್ನು ಇಲ್ಲಿ ಸಲ್ಲಿಸಿ.

ಕೆಳಗಿನ ವಿಳಾಸದಲ್ಲಿ ಅಂಚೆ ಪತ್ರದ ಮೂಲಕ ಕೂಡ ನೀವು Intel ಅನ್ನು ಸಂಪರ್ಕಿಸಬಹುದು. ದಯವಿಟ್ಟು ನಿಮ್ಮ ಸಂಪರ್ಕ ಮಾಹಿತಿ ಮತ್ತು ನಿಮ್ಮ ಗೌಪ್ಯತೆ ವಿನಂತಿ ಅಥವಾ ಗೌಪ್ಯತೆ ಕಳವಳದ ವಿವರವಾದ ವಿವರಣೆಯನ್ನು ಸೇರಿಸಿ.

**Intel ಗೌಪ್ಯತೆ ಅಧಿಕಾರಿ**

ಇಮೇಲ್ ಮೂಲಕ ಸಂಪರ್ಕಿಸಿ

**Intel ಡೇಟಾ ರಕ್ಷಣೆ ಅಧಿಕಾರಿ**

ಇಮೇಲ್ ಮೂಲಕ ಸಂಪರ್ಕಿಸಿ

**ಮಾಹಿತಿ ಮತ್ತು ಸಂವಹನಗಳ ನೆಟ್‌ವರ್ಕ್ ಬಳಕೆ ಮತ್ತು ಮಾಹಿತಿ ರಕ್ಷಣೆಯ ಪ್ರಚಾರದ ಕಾಯ್ದೆಯಡಿ ನಿಯೋಜಿಸಿರುವ Intel Corporation ನ ಕೊರಿಯನ್ ದೇಶದ ಪ್ರತಿನಿಧಿಯನ್ನು ಸಂಪರ್ಕಿಸಲು, ಕೆಳಗೆ ನೋಡಿ:**

ದೇಶೀಯ ಪ್ರತಿನಿಧಿ: ಯೂನ್ & ಯಾಂಗ್ LLC
ಉಸ್ತುವಾರಿ ವಕೀಲರು: ಕ್ಯುನ್ ವೂ ಲೀ
ವಿಳಾಸ: ASEM Tower, 517 Yeongdong-daero, Gangnam-gu, Seoul, Korea
ದೂರವಾಣಿ: +82(2)6003-7658
ಅಥವಾ ಇಮೇಲ್ ಮೂಲಕ ಸಂಪರ್ಕಿಸಿ

**Intel ಇಂಡಿಯಾ ಗೌಪ್ಯತೆ ಕುಂದುಕೊರತೆ ಅಧಿಕಾರಿ**

ಇಮೇಲ್ ಮೂಲಕ ಸಂಪರ್ಕಿಸಿ